ಪ್ರಚಾರ ಪುಸ್ತಕ ಮಾಲೆ

260

ಅಪರಾಧ ಪರಿಚಯ

ಆನಂದಮೂರ್ತಿ ಮಲಾಕಿ

ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ—೨೬೦

ಅಪರಾಧ ಪರಿಚಯ

ಆನಂದಮೂರ್ತಿ ಮಲಾಕಿ

1991

ಮೊದಲನೆಯ ಮುದ್ರಣ—೧೯೬೧

ಬೆಲೆ : ರೂ. ೧-೦೦

ಪ್ರಕಾಶಕರು

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು

ಮುದ್ರಕರು

ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು—೬

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವ ಸಮಯದಲ್ಲಿಯೂ ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚಶಿಕ್ಷಣವನ್ನು ಪಡೆಯಲು ಅವಕಾಶ ಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿ ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿಯ ಪ್ರಸಾರ ಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ, ಸುಲಭ ಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳಿವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ ಅಧ್ಯಾಪಕ ವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನ ನೆಲಸಿ, ಸಾಮಾನ್ಯ ಜನರಂತೆಯೇ ಇದ್ದುಕೊಂಡು, ಗಳಿಸಿರುವ ಜ್ಞಾನವನ್ನು ಜನ ಸಾಮಾನ್ಯರ ಹೃದಯದಲ್ಲಿ ಬಿತ್ತಿ, ತಾವೂ ಆನಂದವನ್ನು ಅನು

ಭವಿಸುತ್ತಾರೆ ಮತ್ತು ಇತರರಿಗೂ ಆನಂದವನ್ನುಂಟುಮಾಡು ತ್ತಾರೆ. ಈ ಉಪನ್ಯಾಸಗಳು ವಿಶ್ವವಿದ್ಯಾನಿಲಯದ ಮೆಟ್ಟಿಲನ್ನು ಹತ್ತಲು ಅವಕಾಶವಿಲ್ಲದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ; ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕ ವಾಗುತ್ತವೆ; ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗ ಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ; ವಿಶ್ವವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ದುಃಖಕ್ಕೆ ಮೂಲಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ, ವಿಶಾಲ ಭಾವನೆ ಮೂಡು ವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು, ಓದಿ ತಿಳಿವಳಿಕೆ ಪಡೆ ಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರ ಬಿದ್ದಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೇ ಭೌತವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಗಣಿತವಿಜ್ಞಾನ, ಸಮಾಜ ವಿಜ್ಞಾನ, ಅರ್ಥಶಾಸ್ತ್ರ; ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ ಮುಂತಾದ ವಿಷಯಗಳನ್ನು ಕುರಿತ ಇನ್ನೂರ ಐವತ್ತೊಂಬತ್ತು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಆನಂದಮೂರ್ತಿ ಮುಲಾಕಿ ಅವರ 'ಅಪರಾಧ ಪರಿಚಯ' ಹೆಚ್ಚು ಜನಪ್ರಿಯವಾಗು ಲೆಂದು ನಾನು ಆಶಿಸುತ್ತೇನೆ.

ಡಾ. ಪಿ. ಸೆಲ್ವಿದಾಸ್
ಕುಲಪತಿ

ಪರಿವಿಡಿ

೧. ಅಪರಾಧ

ನಿಸರ್ಗದಲ್ಲಿನ ಸೂರ್ಯ, ಚಂದ್ರ, ಮಳೆ, ಗಾಳಿ ಮತ್ತು ಸಮುದ್ರದ ಉಬ್ಬರಿಳಿತಗಳು, ಪ್ರಕೃತಿಯ ನಿಯಮಕ್ಕೆ ಒಳಪಟ್ಟಿರುವಂತೆ, ಸಮಾಜದಲ್ಲಿ ಮಾನವನ ವರ್ತನೆ ಕೂಡ, ಅವನಿಂದಲೇ ಕಲ್ಪಿತವಾದ ಧಾರ್ಮಿಕ, ನೈತಿಕ ಪದ್ಧತಿ, ಸಂಪ್ರದಾಯಗಳು ಹಾಗೂ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಕಟ್ಟಳೆಗಳಿಂದ ಬಂಧಿತವಾಗಿದೆ.

ಪ್ರತಿಯೊಂದು ಸಮಾಜವೂ ತನ್ನ ಭದ್ರತೆಗೆ, ಸುವ್ಯವಸ್ಥೆಯಿಂದ ಕೂಡಿದ ಒಂದು ಸರ್ಕಾರದ ರಚನೆಗೆ ಹಾಗೂ ಜನತೆಯ ಕಲ್ಯಾಣಕ್ಕಾಗಿ, ತನ್ನದೇ ಆದ ನೀತಿ ನಿಯಮಗಳನ್ನು ರೂಪಿಸಿಕೊಂಡು, ಒಂದು ಆಯಕಟ್ಟಿನಲ್ಲಿ ಬದುಕುವ ಕ್ರಮ 'ಕಾನೂನು' ಎಂದೆನಿಸಿಕೊಂಡಿತು. ಅದರ ಉಲ್ಲಂಘನೆ 'ಅಪರಾಧ'ವಾದರೆ ಅಂತಹ ಅಪರಾಧಕ್ಕೆ ಶಿಕ್ಷೆಯೂ ಇದೆ.

'ಅಪರಾಧ' ಒಂದು ಜಟಿಲ ಸಮಸ್ಯೆಯಲ್ಲದಿದ್ದರೂ, ಅದು ಸಮಾಜದ ಒಂದು ಅನಿಷ್ಟ. ಬಹುಕಾಲದಿಂದಲೂ ಅಪರಾಧವನ್ನು ನಿಯಂತ್ರಿಸಲು ಶಿಕ್ಷೆಯೊಂದೇ ಮಾರ್ಗ ಎಂಬ ನಂಬಿಕೆಯೂ ಇತ್ತು. ಯಾವುದೇ ರಾಷ್ಟ್ರಕ್ಕೆ ತನ್ನ ದಕ್ಷ ಮತ್ತು ಸಮರ್ಥ ಆಡಳಿತದಿಂದ ಹಾಗೂ ವಿಧಿಸುವ ಶಿಕ್ಷಾಕ್ರಮದಿಂದ ದೇಶವನ್ನು ಅಪರಾಧದಿಂದ ಸಂಪೂರ್ಣವಾಗಿ ವಿಮುಕ್ತಗೊಳಿಸಲು ಸಾಧ್ಯವಾಗಿಲ್ಲ. ವಿಶ್ವದ ಅನೇಕ ಭಾಗಗಳಲ್ಲಿ ಶಿಕ್ಷೆಗೆ ಬದಲಾದ ಬೇರಾವುದೇ ಸೂಕ್ತ ಕ್ರಮವನ್ನು ಕಂಡುಹಿಡಿಯದಿರುವುದೇ 'ಅಪರಾಧ'ಕ್ಕೆ ಕಾರಣ. ಅಪರಾಧವು ಎಂದಿಗೂ ಶೂನ್ಯದಲ್ಲಿ ಜರುಗುವಂತಹದಲ್ಲ. ಅದು ನಡೆಯಬೇಕಾದರೆ ಒಬ್ಬ ವ್ಯಕ್ತಿ

ಹಾಗೂ ಸಮಾಜ ಬೇಕೇಬೇಕು. ಆದುದರಿಂದ ಅಪರಾಧಕ್ಕೂ, ಅಪರಾಧಿಗೂ ನಿಕಟ ಸಂಬಂಧವಿರುವಂತೆ, ಅಪರಾಧಿಗೂ ಸಮಾಜಕ್ಕೂ ಸಂಬಂಧವಿದೆ.

ಅಪರಾಧ ಕಾಲಮಾನ ಸ್ಥಿತಿಗನುಗುಣವಾಗಿ ಬದಲಾಗು ವಂತಹುದು. ಒಂದು ಕಾಲದಲ್ಲಿ ಒಂದು ಪ್ರಾಂತ್ಯದಲ್ಲಿ 'ಅಪರಾಧ'ವೆನಿಸಿಕೊಳ್ಳುವುದು; ಅದೇ ಕಾಲದ ಮತ್ತೊಂದು ಪ್ರಾಂತ್ಯದಲ್ಲಿ ಅಪರಾಧವಾಗಲಾರದು ಅಥವಾ ಮತ್ತೊಂದು ಕಾಲದಲ್ಲಿ ಅದು ಅಪರಾಧವೆಂದೆನಿಸಿಕೊಳ್ಳದೇ ಇರಬಹುದು. ಆದುದರಿಂದ ಒಂದೊಂದು ಪ್ರದೇಶದ ಜನರು ಆಚರಣೆಯಲ್ಲಿದ್ದ ಕಾನೂನುಗಳಿಗೆ ವಿವಿಧ ರೀತಿಯ ಅರ್ಥ ಕಲ್ಪಿಸಿ ವಿವಿಧ ಕ್ರಮ ಗಳನ್ನು ಅನುಷ್ಠಾನಕ್ಕೆ ತಂದರು. ಬಹುತೇಕ ಎಲ್ಲಾ ರಾಷ್ಟ್ರಗಳ ಕಾನೂನು, ಕನ್ನ, ಕಳವು, ದರೋಡೆ, ಬೆಂಕಿ ಪ್ರಕರಣ, ಲೈಂಗಿಕ ಅಪರಾಧ, ಮೋಸ, ವಂಚನೆ ಮುಂತಾದುವುಗಳನ್ನು ಅಪರಾಧ ಗಳೆಂದು ಪರಿಗಣಿಸಿವೆ. ಅಪರಾಧವೆಸಗಿದ ವ್ಯಕ್ತಿಗೆ ಕೊಡುವ ಶಿಕ್ಷೆ ಸೆರೆಮನೆವಾಸವಾಗಬಹುದು ಅಥವಾ ನೋವಿನಿಂದ ಕೂಡಿದ ಕ್ರೂರ ಶಿಕ್ಷೆಯಾಗಬಹುದು ಅಥವಾ ಮರಣದಂಡನೆಯಾಗ ಬಹುದು.

1. ಅಪರಾಧ ಕಾನೂನು

ಒಬ್ಬ ವ್ಯಕ್ತಿಯು ವರ್ತನೆ ಅಥವಾ ಅವನು ನಡೆಸುವ ಚೋರ ಕೃತ್ಯ ಸಮಾಜದ ಎಣಿಕೆಯಲ್ಲಿನ ನೈತಿಕ ಮಾನಕವನ್ನು ಅಥವಾ ಧಾರ್ಮಿಕ ನೀತಿಯನ್ನು ವಿರೋಧಿಸುವಂತಾದಾಗ ಮಾತ್ರ 'ಅಪರಾಧ' ಎಂದೆನಿಸಿಕೊಳ್ಳಲಾರದು. ಆದರೆ ಅಂತಹ ವರ್ತನೆಯನ್ನು ಸಮಾಜ ಬಹಿಷ್ಕರಿಸಿ, ಅದಕ್ಕೆ ತಕ್ಕ ಶಿಕ್ಷೆ ವಿಧಿಸು

ವಂತಾದಾಗ ಮಾತ್ರ 'ಅಪರಾಧ'ವೆಂದೆನಿಸಿಕೊಳ್ಳುತ್ತದೆ. ಹೀಗೆ ಶಿಕ್ಷೆ ವಿಧಿಸುವ ಕಾನೂನು 'ಅಪರಾಧ ಕಾನೂನು' ಎಂದೆನಿಸಿಕೊಂಡಿತು. ಆದರೆ ಈ ಅಪರಾಧ ಕಾನೂನು ಯಾವ ವರ್ಗದ ಅಪರಾಧಗಳು ಸಮಾಜಕ್ಕೆ ಹೆಚ್ಚು ಹಾನಿಯುಂಟುಮಾಡುತ್ತದೆ ಎಂಬುದನ್ನು ವಿವರಿಸುವುದಿಲ್ಲ ಹಾಗೂ ಅದಕ್ಕೆ ಎಂತಹ ಶಿಕ್ಷೆ ಕೊಡಬೇಕೆಂಬುದನ್ನು ಸೂಚಿಸುವುದಿಲ್ಲ.

ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಕೊಲೆ ಮಾಡುವುದರಿಂದ, ಅಂತಹವನ ವರ್ತನೆಯನ್ನು ಸಮಾಜ ಬಹಿಷ್ಕರಿಸಿ ಶಿಕ್ಷೆ ವಿಧಿಸುತ್ತದೆ. ಆದರೆ ವ್ಯಕ್ತಿ ತನ್ನ ದಿನನಿತ್ಯದ ವ್ಯವಹಾರಗಳಲ್ಲಿ, ಆಸ್ತಿನಷ್ಟ, ಮಾನನಷ್ಟ, ಪೌರನೀತಿಯ ಕಾನೂನಿನ ಉಲ್ಲಂಘನೆ, ಟಾರ್ಟ್, ಸಿವಿಲ್ ವ್ಯವಹಾರ ಇವೇ ಮೊದಲಾದ ಹಾನಿಗೊಳಗಾದಾಗ, ಅವನು ನ್ಯಾಯಾಲಯಗಳ ಮೊರೆಹೊಕ್ಕು, ಹಾನಿಗೆ ತಕ್ಕ ಪರಿಹಾರ ಪಡೆದುಕೊಳ್ಳಬಹುದಾದುದರಿಂದ ಅವು ಅಪರಾಧ ಕಾನೂನು ಎಂದೆನಿಸಿಕೊಳ್ಳುವುದಿಲ್ಲ.

ಅನೌಪಚಾರಿಕವಾಗಿ ನ್ಯಾಯ ವಿತರಣೆಯಾಗುತ್ತಿದ್ದ ಅತ್ಯಂತ ಸರಳ ಸಮಾಜದಲ್ಲಿ ವ್ಯಕ್ತಿಗೆ ಆಗುತ್ತಿದ್ದ ನಷ್ಟಕ್ಕೂ, ಗುಂಪಿಗೆ ಆಗುತ್ತಿದ್ದ ಹಾನಿಗೂ ಅಷ್ಟಾಗಿ ವ್ಯತ್ಯಾಸ ಇರಲಿಲ್ಲ. ಅಂದಿನ ಸಮಾಜದಲ್ಲಿ ಎಲ್ಲಾ ಅಪರಾಧಗಳು ವ್ಯಕ್ತಿಗೆ ಮೀಸಲಾಗಿದ್ದುವು. ಟಾರ್ಟ್ ಕಾನೂನಿನಂತೆ, ವ್ಯಕ್ತಿ ವೈಯಕ್ತಿಕವಾಗಿ ಪರಿಹಾರ ಪಡೆದುಕೊಂಡು ತೃಪ್ತನಾಗಬೇಕಿತ್ತು. ಬಲಿಗೀಡಾದ ವ್ಯಕ್ತಿಯ ಕುಟುಂಬ, ಅಪರಾಧಿಯೊಂದಿಗೆ ಹೋರಾಡಿ, ಸೇಡನ್ನು ತೀರಿಸಿಕೊಳ್ಳಬೇಕಾಗಿತ್ತು ಅಥವಾ ಅವನು ಕೊಡುವ ಪರಿಹಾರದಿಂದ ತೃಪ್ತನಾಗಬೇಕಿತ್ತು.

ಕಾಲಕ್ರಮದಲ್ಲಿ ಗುಂಪಿನ ಅಥವಾ ಸಮುದಾಯದ

ಸಾಮಾಜಿಕತೆಗೆ ಬದಲಾಗಿ ಅದು ಆಚರಿಸುತ್ತಿದ್ದ ಕಟ್ಟಳೆಗಳ ಉಲ್ಲಂಘನೆಗೆ ಶಿಕ್ಷೆ ವಿಧಿಸುವುದರ ಮೂಲಕ ಅಪರಾಧ ಕಾನೂನು ಹುಟ್ಟಿಕೊಂಡಿತು. 'ಅಪರಾಧ' ಸಮಾಜದ ವ್ಯವಸ್ಥೆಯನ್ನು ಹಾಳುಮಾಡುತ್ತಿದ್ದುದರಿಂದ ಅದರ ಸಮತೋಲನವನ್ನು ಕಾಪಾಡಲು ದೈಹಿಕ ಶಿಕ್ಷೆ ಕೊಡಲೇಬೇಕೆಂಬುದು ಆ ಕಾಲದ ಜನರ ವಾದವಾಗಿತ್ತು. ಅನಂತರದಲ್ಲಿ, ಸಮಾಜದ ಪ್ರತಿಕ್ರಿಯೆ ಬದಲಾದಂತೆ, ಅಪರಾಧ ನಿಯಂತ್ರಣ ನೀತಿಯೂ ಬದಲಾಗುತ್ತಾ ಬಂತು. 'ಹಲ್ಲಿಗೆ ಹಲ್ಲು, ಕಣ್ಣಿಗೆ ಕಣ್ಣು' ಎಂಬ ಹಮ್ಮುರಾಭಿಯುವರ ಸೇಡಿನ ಸೂತ್ರ ಮಧ್ಯಯುಗದವರೆವಿಗೂ ಆಚರಣೆಯಲ್ಲಿದ್ದ ಒಂದು ತತ್ವವಾಗಿತ್ತು. ಗುರುತರವಾದ ಮರಣದಂಡನೆ ವಿಧಿಸುವುದು ಮತ್ತೊಂದು ಯುಗದ ಪದ್ಧತಿಯಾಗಿತ್ತು. ಆದರೆ ಎರಡು ಶತಮಾನಗಳಿಂದೀಚೆಗೆ ಈ ಪ್ರತಿಕ್ರಿಯೆ ಬದಲಾವಣೆ ಹೊಂದಿ ಅಪರಾಧಿಯನ್ನು ಸೆರೆಮನೆಯ ಬಂಧನದಲ್ಲಿರಿಸುವ ಶಿಕ್ಷಾಪದ್ಧತಿಗೆ ಹೆಚ್ಚು ಪ್ರಚಾರ ದೊರಕಿ ಜಾರಿಗೆ ಬಂದಿದೆ.

2. ಅಪರಾಧ ಕಾನೂನಿನ ಲಕ್ಷಣಗಳು

ಹೀಗೆ ಸಮಾಜದಲ್ಲಿ ಜನಸಾಮಾನ್ಯರ ದೈನಂದಿನ ನಡತೆಯನ್ನು ವ್ಯವಸ್ಥಿತ ರೀತಿಯಲ್ಲಿ ನಿಯಂತ್ರಿಸುವುದೇ ಅಪರಾಧ ಕಾನೂನಿನ ಉದ್ದೇಶ. ಆದರ ಉದ್ದೇಶ ಏನೇ ಆದರೂ ಅದು 'ಅಪರಾಧ ಕಾನೂನು' ಎಂದೆನಿಸಿಕೊಳ್ಳಬೇಕಾದರೆ ಅದಕ್ಕೆ ಈ ಕೆಳಕಂಡ ಲಕ್ಷಣಗಳು ಇರಬೇಕು :

(ಅ) ರಾಜಕೀಯತೆ : ಅಪರಾಧ ಕಾನೂನಿಗೆ ರಾಜಕೀಯ ಸಾರ್ವಭೌಮತ್ವವಿದ್ದು, ಇದನ್ನು ಬೆಂಬಲಿಸುವ ಸರ್ಕಾರ ಶಕ್ತಿಯುತವಾದದ್ದು. ಯಾವುದೇ ರಾಷ್ಟ್ರದಲ್ಲಿ ಶಾಸನಬದ್ಧವಾ

ಘೋಷಿಸಿದ ಕಟ್ಟಳೆಗಳು ಮಾತ್ರ ಕಾನೂನು ಎಂದೆನಿಸಿಕೊಳ್ಳು ತ್ತದೆ. ಕಾನೂನಿಗೆ ಅದನ್ನು ರಚಿಸಿದ ಸರ್ಕಾರದ ಬೆಂಬಲ ವಿರುವುದರಿಂದ ಅದು ಶಿಕ್ಷೆ ವಿಧಿಸುವ ಅಧಿಕಾರವನ್ನು ಸಹ ಹೊಂದಿರುತ್ತದೆ. ಸಾಮಾನ್ಯವಾಗಿ ಸಾಂಪ್ರದಾಯಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ, ನೈತಿಕ, ವಿಧಿ ನಿಷೇಧಗಳಿಂದ ರಚಿತವಾದ ಸಂಘಸಂಸ್ಥೆಗಳು, ಅಪರಾಧ ಕಾನೂನಿನಂತಹ ನಿಬಂಧನೆಗಳಿಂದ ಕೂಡಿವೆಯಾದರೂ, ಜಾರಿಗೆ ತರಬಹುದಾದ ಅವುಗಳ ನಿಯಮ ಗಳು ಕಾನೂನು ಎಂದೆನಿಸಿಕೊಳ್ಳುವುದಿಲ್ಲ. ಅವುಗಳ ಉಲ್ಲಂಘನೆಗೆ ಶಿಕ್ಷೆ ವಿಧಿಸುವ ಅಧಿಕಾರ ಇಲ್ಲದಿರುವುದೇ ಅದಕ್ಕೆ ಕಾರಣ.

(ಆ) ನಿರ್ದಿಷ್ಟತೆ: ಅಪರಾಧ ಕಾನೂನು ರೂಪುಗೊಳ್ಳು ವಾಗ ಅದರ ವ್ಯಾಪ್ತಿಯನ್ನು ಗೊತ್ತುಪಡಿಸಿ, ಪ್ರತಿಯೊಂದು ಅಪರಾಧಕ್ಕೂ ವಿವರಣೆ ಕೊಟ್ಟು, ಅದನ್ನು ಉಲ್ಲಂಘಿಸಿದವನಿಗೆ ನಿರ್ದಿಷ್ಟವಾದ ಶಿಕ್ಷೆಯನ್ನು ಗೊತ್ತುಪಡಿಸುತ್ತದೆ. ಅಲ್ಲದೆ ಯಾವ ಅಪರಾಧಕ್ಕೆ ಎಂತಹ ಶಿಕ್ಷೆ ವಿಧಿಸಬೇಕೆಂಬುದನ್ನು ಸಹ ಸ್ಪಷ್ಟವಾಗಿ ವಿವರಿಸುತ್ತದೆ. ವಿಧಿಸುವ ಶಿಕ್ಷೆ ನಿರ್ದಿಷ್ಟವಾದರೂ, ಅದರ ವಿಧಾನ ನ್ಯಾಯಾಧೀಶರ ವಿಚಕ್ಷಣೆಗೆ ಒಳಪಟ್ಟಿದುದು. ಆದರೆ ನ್ಯಾಯ ನಿರ್ಣಯ ಮಾಡುವ ನ್ಯಾಯಾಧೀಶರಿಗೆ ಅಪರಾಧಿ, ಯಾವ ಅಪರಾಧ ಮಾಡಿದ್ದಾನೆ ಎಂಬುದರ ಬಗ್ಗೆ ಅನುಮಾನ ಬಂದರೆ ಅಥವಾ ಅವನ ವರ್ತನೆ ಯಾವುದೇ ವಿವರಣೆಗೊಳ ಪಡದೆ ಗೊಂದಲವೆಬ್ಬಿಸಿದರೆ, ಅದರ ಸಂಶಯಾಸ್ಪದದ ಲಾಭವನ್ನು ಅಪರಾಧಿಗೆ ಕೊಡಬೇಕೆಂಬುದು ಅಪರಾಧ ನ್ಯಾಯದ ಉದಾತ್ತ ಧ್ಯೇಯ. ಸಿವಿಲ್ ಅಥವಾ ಟಾರ್ಟಿನ ಅಪಕೃತ್ಯಗಳು ಸಾಮಾನ್ಯ ನಿಯಮಗಳ ಸಮೂಹವಾದುದರಿಂದ, ಅವು ಅಪರಾಧ ಕಾನೂನಿಗೆ ಇರುವಂತಹ ನಿರ್ದಿಷ್ಟತೆ ಇರುವುದಿಲ್ಲ.

(ಇ) ಸಮಾನತೆ: ವಿಶ್ವದಲ್ಲೆಲ್ಲಾ "ಸ್ವಾತಂತ್ರ್ಯ ಸಮಾ ಮತ್ತು ಭ್ರಾತೃತ್ವ"ದ ಕೂಗಿನಿಂದ ಪ್ರಜಾಪ್ರಭುತ್ವವ ಸ್ಥಾಪಿಸಿದ ಫ್ರೆಂಚರ ಕ್ರಾಂತಿ, ತಪ್ಪು ಮಾಡಿದವನಿಗೆ ಸಮ ಶಿಕ್ಷೆ ವಿಧಿಸಬೇಕೆಂದು ಸಾರಿತು. ಆದುದರಿಂದ ಸಾಂಪ್ರದಾಯಿ ವಿವರಣೆಯಂತೆ ಅಪರಾಧ ಕಾನೂನಿನ ಪ್ರಧಾನ ಲಕ್ಷಣವೆಂದ ಅದು ಎಲ್ಲರಿಗೂ ಸಾಮಾನ್ಯ ರೀತಿಯಲ್ಲಿ ಅನ್ವಯವಾಗುವುದ ಕಾನೂನಿಗೆ ಬಡವ-ಬಲ್ಲಿದ, ಕೀಳು-ಮೇಲು ಎಂಬ ಭೇದವಿ ಅದು ಎಲ್ಲರಿಗೂ ಏಕರೀತಿಯಲ್ಲಿ ಶಿಕ್ಷೆ ವಿಧಿಸುತ್ತದೆ. ಅ ಯಾರನ್ನೂ ವೈಯಕ್ತಿಕವಾಗಿ ಗುರುತಿಸಿ, ಗೌರವಿಸುವುದಿ ಅದು ನ್ಯಾಯ ವಿತರಣೆಯಲ್ಲಿ ಅದರ ಉಕ್ಕಿನ ಕ್ರಮವ ಭೇದಿಸಿ. ನ್ಯಾಯವನ್ನು ಎತ್ತಿಹಿಡಿಯಲು ನೆರವಾಗುವ ಧ ಸೂತ್ರವೂ ಅಲ್ಲ. ಆದರೆ ಅದರ ಸೂತ್ರವನ್ನು ಹಿಡಿ ಉದ್ದೇಶಕ್ಕನುಗುಣವಾಗಿ ಶಿಕ್ಷೆಯನ್ನು ನೀಡುವಾಗ, ಶಿಕ್ಷೆ ತೀವ್ರತೆಯನ್ನು ಹೆಚ್ಚಿಸಬಹುದು ಅಥವಾ ತಗ್ಗಿಸಬಹು ಆದರೆ ನ್ಯಾಯಾಧೀಶರ ನ್ಯಾಯ ತೀರ್ಪು ಮಾತ್ರ ಏಕರೂ ಯುಳ್ಳದ್ದು.

(ಈ) ದಂಡನೆ: ಅಪರಾಧ ಕಾನೂನು ಬಲಿಷ್ಠವಾದು ಶಿಕ್ಷೆ ವಿಧಿಸದ ಕಾನೂನು ನಪುಂಸಕ ಕಾನೂನು ಎಂದೆ ಕೊಳ್ಳುತ್ತದೆ. ಅಪರಾಧ ಕಾನೂನು ಕೊಡುವ ಶಿಕ್ಷೆ ಖಾ ಗುಂಪಿನವರು ಕೊಡುವ ಶಿಕ್ಷೆಗಿಂತ ವಿಭಿನ್ನವಾದುದು. ಅ ತಪ್ಪು ಮಾಡಿದವನಿಗೆ, ಶಿಕ್ಷೆ ವಿಧಿಸುವುದರ ಮೂಲಕ ನ್ಯಾ ಸ್ಥಾಪನೆ ಮಾಡುತ್ತದೆ ಎಂಬ ನಂಬಿಕೆಯನ್ನು ಎಲ್ಲರಲ್ಲಿಯ ಮೂಡಿಸುತ್ತದೆ. ಶಿಕ್ಷೆ ಕೊಡುವ ಸರ್ಕಾರಕ್ಕೆ ಗೊತ್ತ ಎಲ್ಲೆಯಿದ್ದು ಅದರ ಮೇಲೆ ಅದಕ್ಕೆ ಸಾರ್ವಭೌಮತ್ವವಿರುತ್ತ

ಆದಿ ಸಮಾಜದಲ್ಲಿ, ಪ್ರಾದೇಶಿಕ ಒಡೆತನವಿಲ್ಲದ ಗುಂಪಿನ ನಾಯಕನು ಶಿಕ್ಷೆ ವಿಧಿಸುತ್ತಿದ್ದನು. ವಿಧಿಸುವ ಶಿಕ್ಷೆ ಕಠಿಣವಾಗಿದ್ದು, ಅದರ ವಿಧಾನ ಕ್ರೂರವಾಗಿರುತ್ತಿತ್ತು. ಸಂಶಯಾಸ್ಪದ ವ್ಯಕ್ತಿ ಸಮಾಜದಿಂದ ಪರಿಷ್ಕೃತನಾಗಲು ಅಥವಾ ವ್ಯಕ್ತಿ ತನ್ನ ಪರಿಶುದ್ಧತ್ವವನ್ನು ಪ್ರಮಾಣೀಕರಿಸಲು, ಸುಡುವ ಬೆಂಕಿಯ ಮೇಲೆ ನಡೆಯುವುದು, ಕುದಿಯುವ ಎಣ್ಣೆಯಲ್ಲಿ ಕೈಗಳನ್ನು ಅದ್ದುವುದು, ಇವೇ ಮೊದಲಾದ ಅಮಾನುಷ ವಿಧಾನಗಳನ್ನು ಅನುಸರಿಸಬೇಕಿತ್ತು. ಆದರೆ ನಾಗರಿಕ ಯುಗದಲ್ಲಿ ಶಿಕ್ಷೆಗೆ ಸಮಾಜದ ಪ್ರತಿಕ್ರಿಯೆ ಮಾರ್ಪಾಡು ಹೊಂದಿರುತ್ತದೆ. 'ಅಪರಾಧಕ್ಕೆ ತಕ್ಕ ಶಿಕ್ಷೆಗೆ' ಬದಲಾಗಿ, "ಅಪರಾಧಿಗೆ ತಕ್ಕ ಶಿಕ್ಷೆ" ಎಂಬುದು ಎಲ್ಲರೂ ಒಪ್ಪಿರುತ್ತಾರೆ. ಈ ಕಾರಣದಿಂದ ಶಿಕ್ಷೆ ವಿಧಿಸುವ ನ್ಯಾಯಾಧೀಶರು, ಶಿಕ್ಷೆಯ ತೀವ್ರತೆಯನ್ನು ತಗ್ಗಿಸಬಹುದೇ ಹೊರತು, ವಿಧಿಸುವ ಶಿಕ್ಷೆಯನ್ನು ಮಾತ್ರ ತಪ್ಪಿಸುವ ಹಾಗಿಲ್ಲ. ಶಿಕ್ಷೆ ವಿಧಿಸುವ ಕ್ರಮವನ್ನಾಗಲೀ ಅಥವಾ ವಿಧಿಸಿದವರ ಅಧಿಕಾರವನ್ನಾಗಲೀ ಯಾರೂ ಪ್ರಶ್ನಿಸುವ ಹಾಗಿಲ್ಲ.

3. ಅಪರಾಧ ಕಾನೂನಿನ ಹುಟ್ಟು

(ಅ) ಸಾಂಪ್ರದಾಯಿಕ ಪಂಥ

ಅಪರಾಧ ಕಾನೂನು ಸಿವಿಲ್ ಕಾನೂನಿನ ಅಂಗವೆನಿಸಿದ 'ಟಾರ್ಟ್'ನಿಂದ ಹುಟ್ಟಿದ್ದು. ಆದಿ ಸಮಾಜದಲ್ಲಿ ಗುಂಪಿನ ಸದಸ್ಯನೊಬ್ಬನಿಗೆ ಹಾನಿಯಾದರೆ, ಇಡೀ ಗುಂಪಿಗೆ ನಷ್ಟವಾದಂತೆ ಭಾವಿಸುತ್ತಿತ್ತು. ನಷ್ಟಕ್ಕೆ ಗುರಿಯಾದವನು ನೇರವಾಗಿ ಪರಿಹಾರವನ್ನು ಪಡೆಯಲು ಸಾಧ್ಯವಿಲ್ಲದಾಗ ಗುಂಪಿನ ಸಹಾಯ ಕೋರಿ,

ಹಾನಿ ಮಾಡಿದವನಮೇಲೆ, ದಾಳಿ ನಡೆಸಿ ಸೇಡನ್ನು ತೀ
ಕೊಳ್ಳುತ್ತಿದ್ದನು. ಅಂದಿನ ಸಮಾಜದಲ್ಲಿ ಒಂದೊಂದು ಬುಡಕಟ್ಟ
ಒಂದೊಂದು ಕ್ರಮಗಳನ್ನು ಅನುಸರಿಸುತ್ತಿದ್ದುವು. ಅಂತ
ಬುಡಕಟ್ಟಿನ ಕ್ರಮಗಳನ್ನು ಉಲ್ಲಂಘಿಸಿದವನಿಗೆ ಅಥವಾ ಗುಂಪ
ಪ್ರತಿಭಟಿಸಿದಾಗ, ಗುಂಪು ಅಂತಹವನಿಗೆ ಶಿಕ್ಷೆ ವಿಧಿಸುವು
ಅನಿವಾರ್ಯವಾಗಿತ್ತು.

(ಅ) ಅಪರಾಧ ಕಾನೂನು ಬೆಳೆದು ಬಂದದ್ದು

ಈ ಪಂಥದವರ ಪ್ರಕಾರ ಸಮಾಜದಲ್ಲಿನ ಸದಸ್ಯ
ಸಂಘಟಿತರಾಗಿ ಸಾಮೂಹಿಕ ಜೀವನ ರೂಪಿಸಿಕೊಳ್ಳುವಾಗ ಶಿ
ವಿಧಿಸುವ ಜವಾಬ್ದಾರಿಯನ್ನು ರಾಜ್ಯವೇ ಹೊತ್ತುಕೊಂಡದ್ದರಿಂ
ವ್ಯಕ್ತಿ ಪರಿಹಾರಕ್ಕಾಗಿ ರಾಜ್ಯದ ಮೊರೆಹೋಗಬೇಕಾಯಿತು.

(ಇ) ಅಪರಾಧ ಕಾನೂನು ಪದ್ಧತಿ, ಸಂಪ್ರದಾಯಗಳಿಂದ ಹುಟ್ಟಿದ

ಶಾಸನಬದ್ಧವಾದ ಕಾನೂನುಗಳು ರಚಿತವಾಗುವ ಮೊದ
ಸಮಾಜದಲ್ಲಿ ಅನೇಕ ಪದ್ಧತಿಗಳು, ಸಂಪ್ರದಾಯಗಳು, ಆಚರ
ಯಲ್ಲಿದ್ದುವು. ಕ್ರಮೇಣ ಇವು ನೈತಿಕ ಸೂತ್ರಗಳಾಗಿ ಸ್ಪಷ್ಟ ಘ
ರೂಪ ತಾಳಿ ಕಾನೂನುಗಳಾದುವು.

ಆದಿ ಸಮಾಜದಲ್ಲಿ ಬೇಟೆ ಕ್ರಮವನ್ನು ಉಲ್ಲಂಘಿಸಿದವ
ಗುಂಪು ಅವನನ್ನು ಬಹಿಷ್ಕರಿಸಿ ಶಿಕ್ಷೆ ವಿಧಿಸುತ್ತಿತ್ತು. ಆದ
ದ್ರೋಹ ಬಗೆಯುವುದು, ಗುಂಪಿನ ನೀತಿಯನ್ನು ವಿರೋ
ಸುವುದು, ಮಾಟ ಮಂತ್ರ ಮಾಡುವುದು ಇವೇ ಮೊದಲಾ
ಅಪರಾಧಗಳಿಗೆ ಮರಣದಂಡನೆ ವಿಧಿಸುತ್ತಿತ್ತು. ಬರುಬರುತ
ಜನರ ವೈಜ್ಞಾನಿಕ ದೃಷ್ಟಿ ಬದಲಾದಂತೆ, ಸಮುದಾಯ

ಂಬಂಧಿಸಿದ ಧಾರ್ಮಿಕ ಅಪರಾಧಗಳು ಅಪರಾಧಗಳೆಂದೆಣಿಸ
ಾಗಲಿಲ್ಲ.

. ಅಪರಾಧದ ಸ್ವರೂಪ

ಸಮಾಜದಲ್ಲಿ ನಾವು ಕಾಣುವ ಒಬ್ಬ "ಅಪರಾಧಿ", ಎಲ್ಲ ಂತೆ ಒಬ್ಬ ಸಾಮಾನ್ಯ ಮನುಷ್ಯ. ಅವನು ಒಂದು ಅಪರಾಧ ವನ್ನು ತಿಳಿದೋ, ತಿಳಿಯದೆಯೋ, ಆಕಸ್ಮಿಕವಾಗಿಯೋ ಅಥವಾ ಮನಸ್ಸಿನ ಉದ್ವೇಗಗಳಿಂದಲೋ ಅಥವಾ ರಾಗ ದ್ವೇಷಗಳಿಂದ ಕೂಡಿದ ಕಾಮನೆಯಿಂದಲೋ ಮಾಡಬಹುದು. ಅಂತಹ ಕೃತ್ಯ ಕಾನೂನು ಬಾಹಿರವಾದುದರಿಂದ, ಅದು ಅಪರಾಧವೇ ಸರಿ. ಇದು 'ಅಪರಾಧ'ದ ಸಹಜ ಸ್ವರೂಪ.

ವ್ಯಕ್ತಿಗೆ, ಆಸ್ತಿಗೆ ಸಂಬಂಧಿಸಿದ ಕೊಲೆ, ದರೋಡೆ, ಕಳವು, ಮೊದಲಾದ ಸಾಂಪ್ರದಾಯಿಕ ಅಪರಾಧಗಳು ಉದ್ದೇಶಪೂರ್ವಕ ವಾಗಿ ಮಾಡುವುದರಿಂದ, ಅವು ಕ್ಷಮಾರ್ಹವಲ್ಲ. ಆದರೆ, ಉದ್ದೇಶರಹಿತವಾದ ಕೆಲವು ಅಪರಾಧಗಳು, 'ಅಪರಾಧ'ದ ಸ್ವರೂಪ ವನ್ನು ಬದಲಿಸಿ, ಶಿಕ್ಷೆಯ ತೀವ್ರತೆಯನ್ನು ಕಡಿತಗೊಳಿಸುತ್ತವೆ. ಉದಾಹರಣೆಗೆ, ಕೈಗಾರಿಕೋದ್ಯಮಗಳಲ್ಲಿ ಉಪಯೋಗವಾಗುವ ವಿದ್ಯುತ್‌ಚಾಲಿತ ಯಂತ್ರಗಳನ್ನು ನಡೆಸುವಿಕೆ, ಅದರ ಸಲಕರಣೆಗಳ ಉಪಯೋಗ, ಅನಿಲ ಮತ್ತು ರಾಸಾಯನಿಕ ಉತ್ಪಾದನೆಗಳ, ಅತಿ ವೇಗದ ವಾಹನಗಳ ನಡೆಸುವಿಕೆ, ಅವುಗಳ ಚಾಲಕರ ಅಜಾಗರೂ ಕತೆ, ಅವುಗಳ ಮೇಲ್ವಿಚಾರಕರ ಕ್ರಿಯಾಲೋಪ, ಯಂತ್ರದೋಷ, ಇವೇ ಮೊದಲಾದ ನ್ಯೂನತೆಗಳಿಂದ ಜರುಗುವ ಹಾನಿ, ನಷ್ಟ, ಸಾಂಪ್ರದಾಯಿಕ ಅಪರಾಧಗಳ ಹಾನಿಯ ಪ್ರಮಾಣಕ್ಕಿಂತ ಹೆಚ್ಚು ನಷ್ಟವುಂಟಾಗಬಹುದು. ಈ ಅಪರಾಧಗಳು ಉದ್ದೇಶರಹಿತ

ವಾದುದರಿಂದ ಅವು ಸೋವಿನೊಂದಿಗಿನ ಶಿಕ್ಷೆಗೆ ಬದಲಾಗಿ ಪರಿಹಾರದೊಂದಿಗೆ ಮುಕ್ತಾಯವಾಗುತ್ತದೆ.

ಇನ್ನು ಕೆಲವು ಸಂದರ್ಭಗಳಲ್ಲಿ ಅಪರಾಧ, ಜನರ ನೆಮ್ ಯನ್ನು ಕಲಕಿ ಸಮಾಜದ ಶಾಂತ ವಾತಾವರಣವನ್ನು ಪ್ರಕ್ಷ ಗೊಳಿಸಬಹುದು. ಉದ್ದೇಶಗಳಿಂದ ಸ್ಫೋಟಗೊಂಡ ಮತೀ ಗಲಭೆ, ಪ್ರಾಂತೀಯ ಗಲಭೆಗಳು ಇದಕ್ಕೆ ಉದಾಹರಣೆ. ಗಲಭೆಗಳಲ್ಲಿ ಸಾವುನೋವುಗಳಷ್ಟೇ ಅಲ್ಲದೆ ವಿಧ್ವಂಸಕ ಕೃತ್ಯಗಳಿ ಅಪಾರ ನಷ್ಟವೂ ಆಗುತ್ತದೆ. ಇಲ್ಲಿ ಅಪರಾಧ ತೀವ್ರ ಸ್ವರ ವನ್ನು ತಳೆಯುವುದರಿಂದ, ಶಿಕ್ಷೆಯ ತೀವ್ರತೆಯೂ ಹೆಚ್ಚುತ್ತ ಅಪರಾಧದ ಇತಿಹಾಸದಲ್ಲಿ, ಅದರ ಆಯಾಮವನ್ನೇ ಬದಲಿಸ ಇತ್ತೀಚಿನ 'ಅಪರಾಧ'ದ ಹೊಸ ಕೊಡುಗೆ ಎಂದರೆ ವಿಮಾನ ಹರಣ, ಭಯೋತ್ಪಾದಕ ಕೃತ್ಯಗಳು. ಸೇಡಿನ ಮನೋಭಾ ತಳೆದ ಈ ಅಪರಾಧಗಳು ರಾಷ್ಟ್ರದ ಬಲವನ್ನೇ ಎದುರಿಸ ಅಪರಾಧಗಳು.

5. ಅಪರಾಧ ವರ್ಗೀಕರಣ

ಅಪರಾಧವು ಸಮವರ್ತನೆಯಿಂದ ಕೂಡಿದುದಲ್ಲವಾದ ರಿಂದ ಅದನ್ನು ಎರಡು ವಿಧವಾಗಿ ವರ್ಗೀಕರಿಸಬಹುದು.

(ಅ) ಕೊಲೆ, ದರೋಡೆ, ದೇಶದ್ರೋಹ ಮೊದಲಾದ ಗಳು ಘೋರಾಪರಾಧಗಳು.

(ಆ) ಕಳವು, ಮೋಸ, ವಂಚನೆ, ಹಿಂಸಾ ಮೊದಲಾದುವುಗಳು ಸಾಮಾನ್ಯ ಅಪರಾಧಗಳು.

ಅಪರಾಧವು ಅನೇಕ ಕಾರಣಗಳಿಂದ ಹುಟ್ಟಿದುದರಿ ಅದನ್ನು ವರ್ತನೆಯ ಆಧಾರದ ಮೇಲೆ ವರ್ಗೀಕರಿಸುವುದು ಯಲ್ಲವೆಂಬುದು ಕೆಲವರ ವಾದ.

ಉದಾಹರಣೆ : ಕೊಲೆ ಮತ್ತು ಅಪರಾಧಾತ್ಮಕ ವಧೆ ತೆಗೆದುಕೊಳ್ಳೋಣ. ಒಬ್ಬನು ಮತ್ತೊಬ್ಬನನ್ನು ಉದ್ದೇಶ ಪೂರ್ವಕವಾಗಿ ಪ್ರಾಣಹತ್ಯೆ ಮಾಡಿದರೆ ಅದು ಕೊಲೆ ಎನಿಸಿ ಕೊಳ್ಳುತ್ತದೆ. ಕೊಲೆಗೆ ಜೀವಾವಧಿ ಶಿಕ್ಷೆ ಅಥವಾ ಮರಣ ದಂಡನೆ ವಿಧಿಸುತ್ತಾರೆ. ಆದರೆ ಅದೇ ವ್ಯಕ್ತಿ ಮತ್ತೊಬ್ಬನನ್ನು ಭಾವೋದ್ರೇಕ, ಕೋಪಾವೇಶ, ಬುದ್ಧಿಭ್ರಮಣೆ, ಅಜಾಗರೂಕತೆ, ನ್ಯಾಯಾಧೀಶರ ಆಜ್ಞಾನುಸಾರ ಅಥವಾ ಸನ್ನಿವೇಶ ಒತ್ತಡದಿಂದ ಸ್ವರಕ್ಷಣೆಗಾಗಿ ಪ್ರಾಣಹತ್ಯೆ ಮಾಡಿದರೆ ಅದು ಕೊಲೆಯೆನಿಸಿ ಕೊಳ್ಳುವ ಬದಲು ಸಮರ್ಥನೀಯ ಕೊಲೆಯೆನಿಸಿಕೊಂಡು ಸಾಮಾನ್ಯ ಅಪರಾಧವಾಗುತ್ತದೆ.

ಡಚ್ ಅಪರಾಧ ಶಾಸ್ತ್ರಜ್ಞ ವಿಲಿಯಂ ಬೊಂಗರ್‌ರವರು (ಸೇಡಿನ ಆಧಾರದಮೇಲೆ) ಲೈಂಗಿಕ, ಆರ್ಥಿಕ, ರಾಜಕೀಯ ಮತ್ತು ಸಾಮಾನ್ಯ ಅಪರಾಧಗಳೆಂದು ವಿಂಗಡಿಸಿದ್ದಾರೆ. ಆದರೆ ಇದನ್ನು ಒಪ್ಪದ ಕೆಲವು ತಜ್ಞರು, ಅಂಕಿಅಂಶಗಳ ಆಧಾರದಮೇಲೆ ಅಪರಾಧಗಳನ್ನು ಈ ಕೆಳಕಂಡ ರೀತಿಯಲ್ಲಿ ವಿಂಗಡಿಸಿದ್ದಾರೆ.

(ಅ) ವ್ಯಕ್ತಿಗೆ ಸಂಬಂಧಿಸಿದ ಅಪರಾಧಗಳು.
(ಆ) ಆಸ್ತಿಗೆ ಸಂಬಂಧಿಸಿದ ಅಪರಾಧಗಳು.
(ಇ) ಸಾರ್ವಜನಿಕ ನೈರ್ಮಲ್ಯಕ್ಕೆ ಸಂಬಂಧಿಸಿದ ಅಪರಾಧಗಳು.
(ಈ) ಸಾರ್ವಜನಿಕ ವ್ಯವಸ್ಥೆಗೆ ಸಂಬಂಧಿಸಿದ ಅಪರಾಧಗಳು.
(ಉ) ಸಾರ್ವಜನಿಕ ನ್ಯಾಯಗಳಿಗೆ ಸಂಬಂಧಿಸಿದ ಅಪರಾಧಗಳು.

ಸಾಮಾನ್ಯವಾಗಿ ವರದಿಯಾಗುವ ಅಪರಾಧಗಳೆಂದರೆ

ಸಾರ್ವಜನಿಕರ ವ್ಯವಸ್ಥೆಗೆ ಸಂಬಂಧಿಸಿದ ಅಪರಾಧಗಳು ಅಥವಾ
ಸಾರ್ವಜನಿಕರ ನೈರ್ಮಲ್ಯ ಅಥವಾ ನೀತಿಯನ್ನು ವಿರೋಧಿಸ
ವಂತಹ ಕುಡುಕತನ, ಅಸಭ್ಯ ವರ್ತನೆ, ಹಿಂಸಾಚಾರ, ಲೈಂಗಿ
ಅಪರಾಧ, ಮೋಸ ವಂಚನೆಗಳು. ಇದರೊಂದಿಗೆ ರಾಜಕೀಯ
ಅಪರಾಧಗಳೂ ಸೇರಿಕೊಳ್ಳುತ್ತವೆ. ಅಪರಾಧಗಳನ್ನು ಅಂಕಿ
ಅಂಶಗಳ ಸೂತ್ರದ ಮೇಲಲ್ಲದೆ ಸಮಾಜದ ಅಸ್ತಿತ್ವವನ್ನು
ಅಲ್ಲಾಡಿಸುವ ಕೃತ್ಯಗಳಮೇಲೂ ವರ್ಗೀಕರಿಸಬೇಕು ಎಂಬುದ
ಮತ್ತೆ ಕೆಲವರ ವಾದ.

ಚೋರ ಗುಂಪಿನವರ ಅಥವಾ ಅಂತಹ ಗುಂಪಿನವ
ಸಂಪರ್ಕದಿಂದ ಬೆಳೆಸಿಕೊಂಡು ಬಂದ ಪ್ರವಿಧಿಗಳುಳ್ಳ ನುರಿ
ಅಪರಾಧಿಗಳು ಮತ್ತು ವೃತ್ತಿನಿರತ ಅಪರಾಧಿಗಳು ತಮ್ಮ ವರ್ತ
ಯಿಂದ ಸಮಾಜದ ಅಸ್ತಿತ್ವವನ್ನು ಸಡಲಿಸಿ, ಜನರ ನೆಮ್ಮದಿಯನ್
ಹಾಳು ಮಾಡಿದರೆ. ಬಿಳಿ ತೊಡುಗೆ ಅಪರಾಧಿಗಳು ಸಮಾಜದ
ಗಣ್ಯರಂತೆ ವರ್ತಿಸಿ ಸಮಾಜದ ಆರ್ಥಿಕ ಸ್ಥಿತಿಯನ್ನೇ ತಲೆಕೆಳ
ಮಾಡುತ್ತಾರೆ. ಆದುದರಿಂದ ಇವುಗಳನ್ನು ಸಾಮಾನ್ಯ ಅಪರಾ
ಗಳೊಂದಿಗೆ ಸೇರಿಸಬಾರದೆಂಬುನ್ನು ಎಲ್ಲರೂ ಒಪ್ಪಿರುತ್ತಾರೆ.

ಉದಾಹರಣೆ :- ದೊಂಬಿ, ದರೋಡೆ, ದುಷ್ಕರ್ಮಿ ಕೃತ
ಗಳು ಮತ್ತು ಉಗ್ರಗಾಮಿ ಚಟುವಟಿಕೆಗಳು.

೨. ಬಾಲಾಪರಾಧಗಳು

ಭಾರತದ ಬಾಲಾಪರಾಧದ ನ್ಯಾಯಾಲಯಗಳ ವ್ಯಾಪ್ತಿ
ಒಳಪಟ್ಟ 16 ವರ್ಷದೊಳಗಣ ಬಾಲಕರು, 18 ವರ್ಷದೊಳಗ
ಬಾಲಕಿಯರು, ಅಪರಾಧ ವರ್ತನೆಯಲ್ಲಿ ತೊಡಗಿದರೆ, ಅಂತ

ಪರು ಬಾಲಾಪರಾಧಿಗಳೆನಿಸಿಕೊಳ್ಳುತ್ತಾರೆ. ಬಾಲಾಪರಾಧ ವರ್ತನೆಗೆ ಮೂಲತಃ ಕುಟುಂಬವೇ ಕಾರಣ.

ಬಾಲ್ಯದಲ್ಲಿ ತಂದೆ–ತಾಯಿಯರ ಪ್ರೀತಿ, ವಾತ್ಸಲ್ಯದಿಂದ ವಂಚಿತರಾದವರು ಅಥವಾ ಪೋಷಕರ ಅನಾದರಣೆಗೊಳಗಾದ ವರು, ಕೀಳು ಅಭಿವ್ಯಕ್ತಿಗಳಿಂದ ಕೂಡಿದ ಕುಟುಂಬದ ಸದಸ್ಯರು ಗಳು, ಕಳವು, ಜೂಜು, ವೇಶ್ಯಾವೃತ್ತಿ, ಅಕ್ರಮ ವಸ್ತುಗಳ ಸಾಗಾಣಿಕೆ, ಅವುಗಳ ದಾಸ್ತಾನು, ಮಾರಾಟ, ಕಾಳಸಂತೆ, ಇವೇ ಮೊದಲಾದ ಚಟುವಟಿಕೆಗಳಿಂದ ಕೂಡಿದ್ದಾದರೆ ಅಂತಹ ಕುಟುಂಬದಲ್ಲಿನ ಮಕ್ಕಳು ಬಾಲಾಪರಾಧಿಗಳಾಗುತ್ತಾರೆ.

ಬಾಲ್ಯದಲ್ಲಿನ ಮಗುವು ಶಾಲೆಗೆ ಹೋಗುವುದನ್ನು ಇಷ್ಟ ಪಡುವುದು, ಅಲ್ಲಿನ ಚಟುವಟಿಕೆಗಳಲ್ಲಿ ಭಾಗವಹಿಸುವುದು, ಕಲಿಕೆ ಯಲ್ಲಿ ಆಸಕ್ತಿ ವಹಿಸುವುದು. ಆ ಕುಟುಂಬದ ತಂದೆ–ತಾಯಿಗಳಿಂದ ದೊರಕಬಹುದಾದ ಪೋಷಣೆ, ಪ್ರೋತ್ಸಾಹ. ಸ್ಫೂರ್ತಿ, ನೆರವು, ಇವೇ ಮೊದಲಾದುವುಗಳಿಂದ, ಶಾಲೆಯಲ್ಲಿ ಜಯಗಳಿಸಿದ ಮಗುವು ಆತ್ಮಗೌರವವನ್ನು ಬೆಳೆಸಿಕೊಂಡು, ಮನೆಯಲ್ಲಿನ ಗುರು ಹಿರಿಯರ, ಶಾಲೆಯಲ್ಲಿನ ಉಪಾಧ್ಯಾಯರುಗಳ ಮಾರ್ಗದರ್ಶನ ದಿಂದ, ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಯೆನಿಸಿಕೊಳ್ಳುತ್ತದೆ.

ಆದರೆ, ವಿದ್ಯಾಭ್ಯಾಸದ ಹಂತದಲ್ಲಿ, ಹಸಿವು. ಬಡತನದ ಕೊರತೆಯಿಂದ ಬಳಲಿ, ಕುಟುಂಬದಲ್ಲಿ ಕಲಿಕೆಯ ಕಡೆಗೆ ಸಾಕಷ್ಟು ಪ್ರೋತ್ಸಾಹ ದೊರಕದೆ, ಸಮಾಜದ 'ಓರೆನೋಟಕ್ಕೊಳಗಾಗಿ, ಶಾಲೆಯನ್ನು ಕಂಡರೆ ಬೇಸರಿಕೆಯಾಗಿ, ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನಹರಿಸದೆ, ಜಿಗುಪ್ಸೆ ನಿರಾಸೆಗಳಿಂದ ಕೂಡಿದ ಮಗುವು ಮಾನಸಿಕ ಗೊಂದಲಕ್ಕೊಳಗಾಗಿ, ತನ್ನದೇ ಹಂತದ ಸಹ ಪಾಠಿಗಳ ಗುಂಪನ್ನು ಸೇರಬಯಸುತ್ತದೆ. ಕ್ರಮೇಣ ಅದು ಶಾಲೆ

ಯಿಂದ ದೂರ ಸರಿದು, ತನ್ನ ದಿನದ ಹೆಚ್ಚು ಭಾಗದ ಕಾಲ ವನ್ನು, ತೆರೆದ ಸಮಾಜದ ಅನೀತಿ ವರ್ತನೆಯ ಗುಂಪಿನವ ರೊಂದಿಗೆ ಸೇರಿ ಕಾಲ ಕಳೆಯುತ್ತದೆ. ಇಂತಹ ಮಕ್ಕಳ ತಾರುಣ್ಯಕ್ಕೆ ಕಾಲಿಡುವಾಗ, ಕುಟುಂಬದಲ್ಲಿನ ಅಶಿಸ್ತು, ಅಪ ಬುದ್ಧಿ, ಶಾಲೆಯ ಕಲಿಕೆಯಲ್ಲಿನ ಅಪಜಯ, ಜೀವನದಲ್ಲಿ ಸೋಲನ್ನು ಎದುರಿಸಲು ಸಾಧ್ಯವಾಗದೆ, ಚೋರ ವರ್ತನೆಗಳನ್ನು ಎತ್ತಿ ಹಿಡಿಯುವ ಅಧಿಸಂಸ್ಕೃತಿಯ ಗುಂಪಿನ ಸಂಪರ್ಕ ಬೆಳೆಸಿ ಹಾಗೂ ಅದರ ಹಿರಿಯರ ಸಾಹಸ ಚರಿತ್ರೆಗಳಿಂದ ಪ್ರೋತ್ಸಾಹಿ ರಾಗಿ. ಅಪರಾಧ ವರ್ತನೆಗೆ ಕಾರಣರಾಗುತ್ತಾರೆ.

1. ಶಿಕ್ಷೆ ವಿಧಿಸುವುದು

ಶಿಕ್ಷೆ ವಿಧಿಸುವುದರಲ್ಲಿ ವಿವಿಧ ಸಮಾಜ ವಿವಿಧ ಕ್ರಮಗಳನ್ನು ಅನುಸರಿಸಿ ತನ್ನ ಪ್ರತಿಕ್ರಿಯೆ ವ್ಯಕ್ತಪಡಿಸಿದೆ. ಆದಿಸಮಾಜದಲ್ಲಿ ಕುಟುಂಬದ ಸದಸ್ಯನೊಬ್ಬ ಮಾಡಿದ ಅಪರಾಧಕ್ಕೆ ಕುಟುಂಬವೇ ಶಿಕ್ಷೆ ವಿಧಿಸುತ್ತಿತ್ತು. ಕುಟುಂಬದ ಸದಸ್ಯನನ್ನು ಉರಿಗಣ್ಣು ಬಿಟ್ಟು ನೋಡುವುದು, ಇಲ್ಲವೇ ಛೀಮಾರಿ ಹಾಕುವ ಪದ್ಧತಿಯಿಂದ ಸದಸ್ಯನನ್ನು ಒಳ್ಳೆಯ ದಾರಿಗೆ ತರುವ ಪ್ರಯತ್ನಪಡುತ್ತಿತ್ತು. ಆದರೆ ಈ ಕ್ರಮವು ಶಿಕ್ಷೆಯೇ ಅಲ್ಲವೆಂದು ಪರಿಗಣಿಸಲಾಯಿತು. ಮತ್ತೆ ಕೆಲವು ಸಮಾಜದಲ್ಲಿ ಬುಡಕಟ್ಟಿನ ಅಪರಾಧಗಳಿಗೆ, ಸಮಾಜ ದಿಂದ ಬಹಿಷ್ಕರಿಸುವುದು, ನರಬಲಿ ಕೊಡುವುದು ಅಥವಾ ಮರಣದಂಡನೆ ವಿಧಿಸುವುದು ರೂಢಿಯಲ್ಲಿತ್ತು.

ಮಧ್ಯಯುಗದವರೆವಿಗೂ ಹಮ್ಮುರಭಿ ಸೂತ್ರದ (ಕ್ರಿ.ಪೂ 1750) 'ಕಣ್ಣಿಗೆ ಕಣ್ಣು' 'ಮುಯ್ಯಿಗೆ ಮುಯ್ಯಿ' ಎಂಬ ಪ್ರತೀಕಾರದ ಪದ್ಧತಿ ಜಾರಿಯಲ್ಲಿತ್ತು. ಆದರೆ ದಂಡನೆಯ ಹಿಂ

ಅಡಗಿದ್ದ ಶಿಕ್ಷೆಯ ಮೌಲ್ಯದ ಅರಿವು ಆ ಕಾಲದ ಜನರಿಗೆ ತಿಳಿದಿರಲಿಲ್ಲ. ಎಲ್ಲಾ ಸಮಾಜಗಳು ಅಪರಾಧವನ್ನು ತಡೆಗಟ್ಟಲು ಅನುಸರಿಸಿದ ನಿಯಂತ್ರಣಗಳಲ್ಲಿ ಅತ್ಯಂತ ಉಗ್ರ ಶಿಕ್ಷೆ ಮರಣ ದಂಡನೆಯಾಗಿತ್ತು. ಒಂದು ರೊಟ್ಟಿ ಕದ್ದುದಕ್ಕಾಗಿ, ವ್ಯಕ್ತಿ ತನ್ನ ಪ್ರಾಣವನ್ನೇ ಈಡುಕೊಡುವ ಕಾಲವೊಂದಿತ್ತು. ಈ ಕಾರಣಕ್ಕೆ 1833ರಲ್ಲಿ ಯುರೋಪಿನಲ್ಲಿ ಒಂದು ಸಣ್ಣ ಮಗುವನ್ನು ಗಲ್ಲಿಗೇರಿಸಲಾಯಿತು. ಇಂಗ್ಲೆಂಡ್ ದೇಶದಲ್ಲಿ 8ನೇ ಹೆನ್ರಿಯ ಆಳ್ವಿಕೆಯಲ್ಲಿ, ಸುಮಾರು 72,000 ಅಪರಾಧಿಗಳನ್ನು ಗಲ್ಲಿಗೇರಿಸಲಾಯಿತು. ಮರಣದಂಡನೆಯ ಕ್ರಮದಲ್ಲೂ ವೈವಿಧ್ಯತೆ ಇತ್ತು. ಸಾರ್ವಜನಿಕರ ಸಮ್ಮುಖದಲ್ಲಿ ನೇಣುಗಂಬಕ್ಕೆ ನೇತುಹಾಕುವುದು, ಕತ್ತಿಯನ್ನು ಝಳಪಿಸಿ ಶಿರಚ್ಛೇದನ ಮಾಡುವುದು, ಶಿಲುಬೆಗೆ ಹಾಕುವುದು, ಗಾಲಿಯ ಚಕ್ರಕ್ಕೆ ಕೊಟ್ಟು ಸಾಯಿಸುವುದು, ನೀರಿನಲ್ಲಿ ಮುಳುಗಿಸುವುದು ಇಲ್ಲವೇ ಕೆಂಪು ಇರುವೆಗಳ ಗೂಡುಗಳ ಅಥವಾ ಸಮುದ್ರದಂಚಿನ ಕೆಲವೆಡೆ ಕಲ್ಲು ಕಂಬಕ್ಕೆ ಕಟ್ಟಿ ಏಡಿಗಳನ್ನು ಬಿಟ್ಟು ಅಥವಾ ಚರ್ಮ ಸುಲಿಸಿ ಸಜೀವ ಯಾತನೆಯಿಂದ ಪ್ರಾಣ ನೀಗಿಸುತ್ತಿದ್ದ ಕ್ರಮ ರೂಢಿಯಲ್ಲಿತ್ತು. ತರುವಾಯ ಜನರಿಂದ ಅಂಗೀಕೃತವಾದ ಧಾರ್ಮಿಕ ಪ್ರಜ್ಞೆ ಬೆಳೆದು, ವೈಜ್ಞಾನಿಕ ದೃಷ್ಟಿ ವಿಶಾಲಗೊಂಡಂತೆ ಜನರ ಮೂಢನಂಬಿಕೆಗಳು ಮಾಯವಾಗಿ, ಆಚರಣೆಯಲ್ಲಿದ್ದ ಪದ್ಧತಿಗಳು ಸಡಿಲಗೊಂಡು ಕೆಲವು ಸಮಾಜಗಳಲ್ಲಿ ದೈಹಿಕ ಶಿಕ್ಷೆ, ಸೆರೆಮನೆ ವಾಸ ಮತ್ತು ಪ್ರಬೋಧನೆಯ ಮೇಲೆ ಎಚ್ಚರ ಕೊಟ್ಟು ಬಿಡುಗಡೆ ಮಾಡುವ ಕ್ರಮ ಜಾರಿಗೆ ಬಂತಾದರೂ, ಮರಣದಂಡನೆ ಮಾತ್ರ ಹೋಗಲಿಲ್ಲ. ಅಪರಾಧಗಳನ್ನು ನಿಯಂತ್ರಿಸುವುದರಲ್ಲಿ ಮರಣದಂಡನೆ ಹೆಚ್ಚು ಪರಿಣಾಮಕಾರಿಯಾದ ವಿಧಾನ.

ಆಧುನಿಕ ಯುಗದಲ್ಲಿ, ಅಪರಾಧಿಗೆ ನೋವಿಲ್ಲದೆ ಸುಲ
ವಾಗಿ ಸಾವನ್ನು ಕೊಡುವುದು ಜಾರಿಗೆ ಬಂದಿದೆ. ಗಲ್ಲಿಗೇರಿಸುವುದ
ಅನಿಲ ಕೋಣೆಯಲ್ಲಿ ಕೂಡುವುದು, ವಿದ್ಯುತ್ ಕುರ್ಚಿಯ ಮೇ
ಕೂರಿಸುವುದು, ಗುಂಡಿಟ್ಟುಕೊಲ್ಲುವುದು, ವಿಷದ ಚುಚ್ಚುಮದ
ಕೊಡುವುದು, ಇವೇ ಮೊದಲಾದುವುಗಳು. ಕೆಲವು ರಾಷ್ಟ್ರಗಳ
ಅಂದರೆ 1. ನೆದರ್‌ಲ್ಯಾಂಡ್ಸ್ (1870), ನಾರ್ವೆ (1902),
ಸ್ವೀಡನ್ (1921), ಡೆನ್ಮಾರ್ಕ್ (1930), ಸ್ವಿಟ್ಸರ್‌ಲ್ಯಾಂಡ
(1940), ಪಶ್ಚಿಮ ಜರ್ಮನಿ (1949), ಆಸ್ಟ್ರಿಯಾ (1950),
ನ್ಯೂಜಿಲ್ಯಾಂಡ್ (1961), ಸಂಯುಕ್ತ ರಾಷ್ಟ್ರ (ಯು.ಕೆ.1965),
ಕೆನಡಾ (1976) ಮತ್ತು ಫ್ರಾನ್ಸ್ (1981) ಮರಣದಂಡನ
ಯನ್ನು ರದ್ದುಪಡಿಸಿದೆ ಆದರೆ ಔದ್ಯೋಗಿಕ ರಾಷ್ಟ್ರಗಳಲ್ಲ
ಕಮ್ಯೂನಿಸ್ಟ್ ರಾಷ್ಟ್ರವೊಂದನ್ನು ಬಿಟ್ಟು, ಅಮೆರಿಕಾದ ಸಂಯುಕ್ತ
ಸಂಸ್ಥಾನದಲ್ಲಿ ಈಗಲೂ ಮರಣದಂಡನೆ ಜಾರಿಯಲ್ಲಿದೆ.

ಎರಡನೇ ಮಹಾಯುದ್ಧವಾದಮೇಲೆ ಬಂದ ನಾಗರಿಕತೆ
ಅಸಂಖ್ಯಾತ ಕಾನೂನುಗಳನ್ನು ಜಾರಿಗೆ ತಂದು ಅಪರಾಧಗಳ
ಸಂಖ್ಯೆಯನ್ನು ಹೆಚ್ಚಿಸಿತು. ಇಂತಹ ವೈಶಿಷ್ಟ್ಯ ಹೊಂದಿದ ಸಮಾಜ
ದಲ್ಲಿ ಮಾನವನು ತನ್ನ ನೆರೆಯುವನ ಬಗ್ಗೆ ಹೆಚ್ಚು ಹೊಣೆಗಾರಿ
ಹೊತ್ತ ವರ್ತನೆಯಿಂದ ಜೀವಿಸಬೇಕಾಯಿತು. ಇದಕ್ಕೆ ಜಾರಿ
ಯಲ್ಲಿರುವ ಅನೇಕ ಸ್ಥಳೀಯ ಮತ್ತು ವಿಶೇಷ ಕಾನೂನುಗಳೆ
ಸಾಕ್ಷಿ.

2. ಅಪರಾಧಿ

'ಅಪರಾಧಿ' ಯಾರು ? ಎಂತಹವನು ? ಎಂಬ ಪ್ರಶ್ನೆಗ
ಸ್ಥೂಲವಾಗಿ ವಿವರಣೆ ನೀಡುವುದಾದರೆ, ಕಾನೂನುಬಾಹಿರ

ಕೃತ್ಯವನ್ನು ಮಾಡುವವನು ಎಂದು ಹೇಳಬಹುದು. ಅಪರಾಧ ಕಾನೂನಿನ ಪ್ರಕಾರ ಒಬ್ಬ ವ್ಯಕ್ತಿ 'ಅಪರಾಧ' ಮಾಡಿ, ನ್ಯಾಯ ವಿಚಾರಣೆಗೆ ಗುರಿಯಾಗಿ ಶಿಕ್ಷಾರ್ಹನಾದಾಗ ಮಾತ್ರ 'ಅಪರಾಧಿ' ಎಂದೆನಿಸಿಕೊಳ್ಳುತ್ತಾನೆ ಎಂದು ಹೇಳಬಹುದು. ಆದರೆ ಎಂಥವನನ್ನು 'ಅಪರಾಧಿ' ಎಂದು ಕರೆಯಬೇಕೆಂಬುದು ಒಂದು ವಿವಾದಾಂಶ.

ಒಮ್ಮೆ ಯಾವುದೋ ಒಂದು ಕ್ಷುಲ್ಲಕ ಕಾರಣಕ್ಕೆ ಅಥವಾ ಆವೇಶದ ಭರದಲ್ಲೋ ಅಥವಾ ಯಾವುದಾದರೂ ಒಂದು ಸನ್ನಿವೇಶದ ಒತ್ತಡಕ್ಕೋ ಮಣಿದು, ಅಪರಾಧವನ್ನು ಮಾಡಿ, ಸೆರೆಮನೆ ಸೇರಿದ ಮಾತ್ರಕ್ಕೆ ಅವನು 'ಅಪರಾಧಿ' ಎಂದು ಪರಿಗಣಿಸುವುದು ಸೂಕ್ತವಲ್ಲ.

ಈ ಸಂದರ್ಭದಲ್ಲಿ ಹೆಸರಾಂತ ಫ್ರೆಂಚ್ ಕಾದಂಬರಿಕಾರ ವಿಕ್ಟರ್ ಹ್ಯೂಗೋರವರ "ಲೇವಿಸಿರಬಲ್ಸ್" ಎಂಬ ಕಾದಂಬರಿಯನ್ನು ಸ್ಮರಿಸುವುದು ಉಚಿತ.

ಒಮ್ಮೆ ಜೀನ್ ವ್ಯಾಲ್ ಜೀನ್ ಎಂಬೊಬ್ಬ ವ್ಯಕ್ತಿ ಹಸಿವನ್ನು ತಾಳಲಾರದೆ, ಬಡತನದ ಒತ್ತಡಕ್ಕೆ ಮಣಿದು ರೊಟ್ಟಿಯೊಂದನ್ನು ಕದಿಯುತ್ತಾನೆ. ಈ ಅಪರಾಧಕ್ಕೆ ವಿಧಿಸಿದ ಶಿಕ್ಷೆ ಸೆರೆಮನೆ ವಾಸ. ವ್ಯಕ್ತಿ ಸೆರೆಮನೆಯಿಂದ ಬಿಡುಗಡೆಯಾದಮೇಲೆ ಗಣ್ಯವ್ಯಕ್ತಿಯೆನಿಸಿಕೊಂಡು ಪ್ಯಾರಿಸ್ ಪಟ್ಟಣದ ಮಹಾಪಾಲಕ(ಮೇಯರ್)ನಾಗುತ್ತಾನೆ. ಆದರೆ ಅವನ ಚಲನವಲನಗಳಮೇಲೆ ಕರ್ತವ್ಯದ ಪೊಲೀಸನೊಬ್ಬ ಸದಾ ತನ್ನ ಕಣ್ಗಾವಲಿರಿಸುತ್ತಾನೆ. ಜೀನ್ ವ್ಯಾಲ್ ಜೀನನು ತನ್ನ ಸಾಕುಮಗಳು ಮತ್ತು ಅವಳ ಪ್ರಿಯತಮನನ್ನು ತನ್ನ ಬೆನ್ನಟ್ಟಿ ಬರುವ ಪೊಲೀಸಿನವನ ವಕ್ರದೃಷ್ಟಿಯಿಂದ ತಪ್ಪಿಸಿಕೊಳ್ಳಲು ಪ್ಯಾರಿಸ್ ಪಟ್ಟಣದ ಒಳಚರಂಡಿಯನ್ನು ಹಾಯ್ದು ಹೊರ

ಬರುವಾಗ, ಪೊಲೀಸಿನವನು ಅವನನ್ನು ಹಿಡಿದು, ಅವನ ನಿ
ರೂಪವನ್ನು ಬಯಲುಮಾಡಿ, ಅವನು 'ಅಪರಾಧಿ' ಎಂದು ಇಡಿ
ವಿಶ್ವಕ್ಕೆ ಪ್ರಚುರಪಡಿಸುತ್ತಾನೆ. ಆದರೆ ಅಂತ್ಯದಲ್ಲಿ ಸುಧಾರ
ಹೊಂದಿದ ವ್ಯಕ್ತಿಯನ್ನು ತನ್ನ ಕರ್ತವ್ಯದ ಕ್ರೂರತನದಿ
'ಅಪರಾಧಿ'ಯನ್ನಾಗಿ ಮಾಡಿದೆನಲ್ಲಾ ಎಂಬುದಕ್ಕೆ ಪಶ್ಚಾತ್ತಾ
ಪಟ್ಟು, ನದಿಯ ನೀರಿನಲ್ಲಿ ಮುಳುಗಿ ಆತ್ಮಹತ್ಯೆ ಮಾಡಿಕೊಳ
ತ್ತಾನೆ. ನಮಗೆ ಇಲ್ಲಿ ಕಥಾವಸ್ತು ಗೌಣವಾದರೂ ಆದರಲ್ಲಿ
ನೀತಿ ಬಹುಮುಖ್ಯ. ಈ ಕಾದಂಬರಿಯಿಂದ ಕಲಿಯಬಹುದಾ
ಪಾಠವೆಂದರೆ, ಒಮ್ಮೆ ಸೆರೆಮನೆ ಸೇರಿದ ವ್ಯಕ್ತಿ ಅಕ್ಷಮ್ಯ ಅಪರಾ
ಮಾಡದಿದ್ದರೂ ಸಮಾಜದಲ್ಲಿ ಅವನನ್ನು 'ಅಪರಾಧಿ'ಯೆಂದ
ಗುರುತಿಸಿ ಓರೆ ನೋಟದಿಂದ ಕಾಣುವುದು. ಇಲ್ಲಿ ಕರ್ತವ್ಯ
ಧರ್ಮವೆಂದು ನಂಬಿದ ಪೊಲೀಸಿನವನು, ಮನುಷ್ಯ ಸಹಜವಾ
ತಪ್ಪನ್ನು ಕ್ಷಮಿಸಿ ಸುಶಿಕ್ಷಿತನಾದ ಗಣ್ಯವ್ಯಕ್ತಿಯೊಬ್ಬನನ
'ಅಪರಾಧಿ' ಎಂದು ಗುರುತಿಸಿ, ಇಡೀ ಜಗತ್ತಿಗೆ ಪ್ರಚುರಪಡಿಸಲ
ಪ್ರಯತ್ನಿಸಿದುದು ಕ್ಷಮಾರ್ಹವಲ್ಲ. ನಮ್ಮ ನಾಡಿನಲ್ಲಿ ಇಂತ
ಧರ್ಮಾಂಧರಿಗೆ ಕೊರತೆ ಇಲ್ಲ, ಠಾಣೆಯಲ್ಲಿ ಕೆಲಸ ಮಾಡು
ಪೊಲೀಸರು ನಿಷ್ಠೆಯಿಂದ ಕೆಲಸ ಮಾಡಿ ಅಪರಾಧದಲ್ಲಿ ತೊಡಗಿ
ವ್ಯಕ್ತಿಗಳನ್ನು ಹಿಡಿಯಲು ಸೋಮಾರಿತನದಿಂದಲೋ, ಉದ
ಸೀನತೆಯಿಂದಲೋ ಪ್ರಯತ್ನ ಪಡದೆ. ತಮ್ಮ ಠಾಣಾ ಸರಹ
ನಲ್ಲಿ ಅಪರಾಧ ನಿಯಂತ್ರಣದ ಬಿಗಿ ತಡೆ ಹಾಕಿದ್ದೇವೆಂದು ಅಂ
ಅಂಶಗಳಿಂದ ಸಮರ್ಥಿಸಿಕೊಳ್ಳಲು ಅಥವಾ ತಾನೊಬ್ಬ ಉತ್ತ
ವಾದ ಪತ್ತೇದಾರ ಪೊಲೀಸಿನವನು ಎಂದು ತೋರ್ಪ
ಮೇಲಧಿಕಾರಿಗಳ ಒಲುಮೆಯ ಗಳಿಕೆಗೆ ನಡೆಸಬಹುದಾದ ಒಂ
ಸಂಚಿನಂತೆ. ಇಂತಹವರ ವರ್ತನೆಗಳನ್ನು ಬಯಲಿಗೆಳೆಯು

ಸಾಧ್ಯವಿಲ್ಲವಾದರೂ, ಪೊಲೀಸು ಇಲಾಖೆ ಇಂತಹ ವರ್ತನೆಯ ಅಧಿಕಾರಿಗಳಿಂದ ಮುಕ್ತವಾಗಿಲ್ಲ. ಪ್ರತಿಯೊಬ್ಬನೂ ತನ್ನ ಆತ್ಮ ಶೋಧನೆಯಿಂದ ಇದಕ್ಕೆ ಉತ್ತರಿಸಬೇಕಷ್ಟೆ.

ಒಮ್ಮೆ 'ಅಪರಾಧಿ' ಎಂಬ ಹಣೆಚೀಟಿಯಿಂದ ವ್ಯಕ್ತಿಯನ್ನು ಗುರುತಿಸಿ ಸಮಾಜದ ವಕ್ರ ನೋಟವನ್ನು ಬೀರುವುದರಿಂದ ಅಥವಾ ಪೊಲೀಸರು ಮೇಲಿಂದ ಮೇಲೆ ಅಂತಹವನನ್ನು ಸೆರೆಮನೆಗೆ ಕಳುಹಿಸುವುದರಿಂದ ವ್ಯಕ್ತಿ 'ಕಣ್ಮರೆಯ ಅಪರಾಧಿ' ಎನಿಸಿಕೊಂಡು, ಸಮಾಜದಮೇಲೆ ತನ್ನ ಸೇಡನ್ನು ತೀರಿಸಿ ಕೊಳ್ಳಲು ಅಪರಾಧವನ್ನೇ ವೃತ್ತಿಯಾಗಿ ಮಾಡಿಕೊಳ್ಳುತ್ತಾನೆ. 'ಕಣ್ಮರೆಯಾದ ಅಪರಾಧಿ' ವಿರಳ ಸಂದರ್ಭಗಳಲ್ಲಿ ಬಹುದೂರದ ಪ್ರದೇಶಕ್ಕೆ ಹೋಗಿ ಸಭ್ಯಪ್ರಜೆಯಂತೆ ಜೀವಿಸುವ ನಿದರ್ಶನಗಳು ಇವೆ. ಆದರೆ ಪೊಲೀಸರ ಭಯದ ನೆರಳಿನಲ್ಲಿ ಅವನು ಸದಾ ಜೀವಿಸುತ್ತಿರುತ್ತಾನೆ.

ಪೊಲೀಸರು ಅಪರಾಧಗಳನ್ನು ಪತ್ತೆ ಹಚ್ಚಲು ಅಪರಾಧಿ ಗಳನ್ನು ಈ ರೀತಿಯಲ್ಲಿ ವರ್ಗೀಕರಿಸಿದ್ದಾರೆ.

(ಅ) ಆಕಸ್ಮಿಕ ಅಪರಾಧಿ
(ಆ) ಗೊತ್ತಾದ ಅಪರಾಧಿ (ಗೊತ್ತಾದ ಕಳ್ಳ, ಕೆ.ಡಿ)
(ಇ) ವೃತ್ತಿನಿರತ ಅಪರಾಧಿ
(ಈ) ಕಣ್ಮರೆಯ ಅಪರಾಧಿ (ತಲೆ ಮರೆಸಿಕೊಂಡ ಅಪರಾಧಿ)
(ಉ) ವ್ಯವಸ್ಥಿತ ಅಪರಾಧಿ
(ಊ) ಬಿಳಿ ತೊಡುಗೆ ಅಪರಾಧಿ
(ಋ) ಪುನರಾವರ್ತಿ ಅಪರಾಧಿ

ಅಪರಾಧ ಕೃತ್ಯ ಮಾಡಿದ ವ್ಯಕ್ತಿಯನ್ನು 'ಅಪರಾಧಿ' ಎಂದು ಗುರುತಿಸುವುದಾದರೆ ಅಂತಹವನು ಎಷ್ಟು ಕಾಲದವರೆಗೂ

'ಅಪರಾಧಿ' ಎಂದೆನಿಸಿಕೊಳ್ಳುತ್ತಾನೆ ಎಂಬುದು ಮುಂದಿನ ಪ್ರ
ಜುಲ್ಮಾನೆ ತೆರುವವರೆಗೂ ಅಥವಾ ಶಿಕ್ಷೆ ತೀರುವವರೆವಿಗ
ಅಥವಾ ಸಾಯುವವರೆವಿಗೂ 'ಅಪರಾಧಿ'ಯೇ ಎಂಬ ಪ್ರಶ್ನೆ
ಅಪರಾಧ ಕಾನೂನು ಇದುವರೆವಿಗೂ ಉತ್ತರಿಸಿಲ್ಲ. ಅಪರಾ
ಶಾಸ್ತ್ರ, ಸಮಾಜಶಾಸ್ತ್ರಗಳಲ್ಲೂ ಈ ಪ್ರಶ್ನೆಗೆ ಉತ್ತರ ಸಿಕ್ಕಿ
ಆದರೂ ರೂಢಿಯಲ್ಲಿನ ಜನಸಾಮಾನ್ಯರು ಅಂತಹ ವ್ಯಕ್ತಿಯನ
ತಮ್ಮ ಓರೆ ನೋಟದಿಂದ ಕಾಣುವುದನ್ನು ಇನ್ನೂ ಬಿಟ್ಟಿ
ಬಿಡುವುದೂ ಇಲ್ಲ. ಈ ಕಾರಣದಿಂದಲೇ ಜನಸಾಮಾನ್ಯರಿ
'ಅಪರಾಧ ಪರಿಚಯ' ಬಹು ಮುಖ್ಯ.

ಆದುದರಿಂದ ಸಮಾಜವು 'ಅಪರಾಧಿ'ಯ ಬಗ್ಗೆ ತಳೆದಿರು
ದೋಷಪೂರಿತ ಭಾವನೆಯನ್ನು ಬದಲಿಸಲು ಅಪರಾ
ಶಾಸ್ತ್ರಜ್ಞರು, ಸಮಾಜ ಶಾಸ್ತ್ರಜ್ಞರು, ಮನೋವಿಜ್ಞಾನಿಗಳ
ಮನೋ ಚಿಕಿತ್ಸಕ ವೈದ್ಯರುಗಳು, ಅಪರಾಧಿಯ ಬಗ್ಗೆ ತಿರು
ನೋಟ ಹಾಯಿಸಿ, ಅಪರಾಧ, ತತ್ಸಂಬಂಧದ ವಿಷಯದ ಮೇ
ಪರ್ಯಾಯ ಸಿದ್ಧಾಂತಗಳನ್ನು, ವಿರೋಧ ತತ್ವಗಳನ್ನು ರೂಪಿ
ಅಪರಾಧ ಶಾಸ್ತ್ರವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡು
ಪ್ರಯತ್ನಿಸಿದ್ದಾರೆ.

ಅಪರಾಧ ಶಾಸ್ತ್ರವನ್ನು, ವಿಜ್ಞಾನದಂತೆ ಭೌತ ಚೌಕ
ನಲ್ಲಿರಿಸಿ, ಪ್ರಯೋಗಗಳು, ಸಿದ್ಧಾಂತಗಳಿಂದ ಅಧ್ಯಯನ ಮಾಡು
ಸಾಧ್ಯವಿಲ್ಲ. ಕಾರಣ ಅದು ಆಗಿಂದಾಗ್ಗೆ ಬದಲಾಗಬಹುದಾ
ಸಮಾಜದ ಸ್ವರೂಪ, ರಚನೆ ಮತ್ತು ಅವರ ಸದಸ್ಯರು
ವರ್ತನೆಯನ್ನಾಧರಿಸಿದೆ. ಆದರೂ ಅಪರಾಧ ಶಾಸ್ತ್ರವ
ವಿಜ್ಞಾನವಾಗಿ ಬಳಸುವ ಸಾಧ್ಯತೆ ಇದೆ ಎಂಬುದು ಅನೇಕ ತಜ್ಞ
ವಾದ.

3. ಪ್ರಾಥಮಿಕ ಸಮಾಜದ ಕುಟುಂಬ ಮತ್ತು ಅಪರಾಧ

ಪ್ರಾಥಮಿಕ ಸಮಾಜದಲ್ಲಿ ಕುಟುಂಬಗಳು ಪುರುಷ ಪ್ರಧಾನವಾಗಿದ್ದು, ಕುಟುಂಬಗಳು ಪ್ರಾಣರಕ್ಷಣೆಗಾಗಿ, ಸಾಂದರ್ಭಿಕವಾಗಿ, ತನ್ನದೇ ಆದ ಸ್ವರೂಪದಿಂದ ಕೂಡಿದ ಗುಂಪಾಯಿತು. ಗುಂಪಿಗೆ ಬೇಟೆಯಾಡಿ, ಆಹಾರ ಹುಡುಕಲು ಗೊತ್ತಾದ ಎಲ್ಲೆ ಇತ್ತು. ಕುಟುಂಬಗಳಲ್ಲಿನ ಪುರುಷರು ಬೇಟೆಯಾಡಿ. ಕಂದಮೂಲಾದಿಗಳನ್ನು ಆಯ್ದು, ಆಹಾರವನ್ನು ಒದಗಿಸುವವರಾದರೆ, ಸ್ತ್ರೀಯರು ತಂದ ಆಹಾರವನ್ನು ಅಡಿಗೆ ಮಾಡಿ ಮಕ್ಕಳನ್ನು ಪಾಲಿಸುವುದು ಅವರ ಕರ್ತವ್ಯವಾಗಿತ್ತು. ಕುಟುಂಬಗಳಿಗೆ ವಾಸಿಸಲು ಸರಿಯಾದ ನೆಲೆ ಇಲ್ಲದೆ ಅದರ ಸದಸ್ಯರುಗಳು ಛಳಿ, ಗಾಳಿ, ಮಳೆ ತಡೆಯುವಷ್ಟು ಮಾತ್ರ ಅರೆ ಬೆತ್ತಲೆಯ ಉಡುಪು, ಹೊದ್ದಿಕೆಗಳುಳ್ಳವರಾಗಿದ್ದರು. ಈ ಗುಂಪುಗಳು ಆಹಾರ ಸಂಗ್ರಹಿಸಲು ಬೇಕಾದ ಉಪಕರಣಗಳನ್ನು ಬಿಟ್ಟು, ದೈನಂದಿನ ಜೀವನಕ್ಕಾಗುವಷ್ಟು ಆಹಾರ ಸಾಮುಗ್ರಿಗಳು ಮಾತ್ರ ಅವರಲ್ಲಿರುತ್ತಿತ್ತು. ಇಂತಹ ಸಮಾಜದಲ್ಲಿ ಕುಟುಂಬದ ಸದಸ್ಯನು ತಪ್ಪು ಮಾಡಿದರೆ ಕುಟುಂಬವೇ ಸದಸ್ಯನನ್ನು ಶಿಕ್ಷಿಸುತ್ತಿತ್ತು. ಕೊಡುವ ಶಿಕ್ಷೆ ಸರಳವಾಗಿರುತ್ತಿತ್ತು. ಹುಬ್ಬು ಗಂಟಿಕ್ಕುವುದು ಅಥವಾ ಉರಿಗಣ್ಣಿನಿಂದ ನೋಡುವುದು ಶಿಕ್ಷಾಕ್ರಮವಾಗಿತ್ತು. ಎಲ್ಲೆ ಮೀರಿ ಬೇಟೆಯಾಡಿದವನಿಗೆ ಗುಂಪು ಬಹಿಷ್ಕರಿಸುತ್ತಿತ್ತು. ವ್ಯಕ್ತಿ ಸಮಾಜದ ಸಂಪರ್ಕ ಕಳೆದುಕೊಂಡು ಏಕಾಂತವಾಗಿ ಅಲೆಯಬೇಕಿತ್ತು. ಗುಂಪಿನ ಸಂಪರ್ಕ ಕಳೆದುಕೊಂಡ ವ್ಯಕ್ತಿ ಪ್ರತ್ಯಾವರಣಕ್ಕೆ ಹೊಂದಿಕೊಳ್ಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದುದೂ ಉಂಟು.

ಬರುಬರುತ್ತಾ ಈ ಅಲೆಮಾರಿ ಗುಂಪುಗಳು ನೀರಿನ ವಸತಿಗಳ ಬಳಿ ಶಾಶ್ವತವಾದ ನೆಲೆಯೂರಿ ಕೃಷಿ, ಪಶುಪಾಲನೆ

ಯನ್ನು ಮುಖ್ಯ ವೃತ್ತಿಯನ್ನಾಗಿ ಅವಲಂಬಿಸಿದುದರಿಂ
ಕುಟುಂಬಗಳು ಸ್ವಾವಲಂಬಿಗಳಾದುವು. ಒಬ್ಬನ ಸಂಪರ್ಕ ಒಬ್ಬ
ಹೊಂದಿದ್ದು ಪ್ರತಿಯೊಬ್ಬನೂ ಪ್ರಕೃತಿಯ ಒಂದು ಭಾಗವಾಗಿದ್ದನ
ಈ ಕಲ್ಪನೆಯನ್ನು ಹೊಂದಿದ್ದ ಮಾನವನು ಭ್ರಮಿಸಿ, ತಾ
ಸೃಜಿಸಿದ ಭೂತ, ಪ್ರೇತಾದಿಗಳೇ, ಭೂಮಿಯ ಸೃಷ್ಟಿ, ಜೀವದ
ತ್ತಿಗೆ ಕಾರಣವೆಂದು ನಂಬಿದವನಾಗಿದ್ದನು. ಇವು ಮಾನವನೊ
ನಿಕಟ ಸಂಪರ್ಕ ಹೊಂದಿದ್ದು, ಅದರ ನಂಬಿಕೆ ಅವನ ನೆನಪಿನ
ಶಾಶ್ವತವಾಗಿ ಉಳಿದುವು. ಮಾನವ ಅವುಗಳ ಕೋಪ, ಸಂತುಷ್ಟ
ಯಲ್ಲಿ ತನ್ನ ಅಳಿವು, ಉಳಿವುಗಳನ್ನು ಕಂಡುಕೊಂಡನು. ಇಂತ
ಗುಂಪು ಜೀವನದಲ್ಲಿ, ಅವರು ರಚಿಸಿಕೊಂಡ ಕಟ್ಟಳೆಗಳು ಕುಟುಂ
ಗಳನ್ನು ಬಿಗಿ ಕಟ್ಟಿನಲ್ಲಿ ಬಂಧಿಸಿದ್ದು, ಕುಟುಂಬ ಜೀವನದ
ನೆಮ್ಮದಿ, ಶಾಂತಿ, ಸಮಾಧಾನವಿತ್ತು. ಗುಂಪನ್ನು ಬಂಧಿಸಿ
ಕಟ್ಟಳೆಗಳು ಎರಡು ರೀತಿಯವಾಗಿದ್ದುವು. ಒಂದು ಕುಟುಂಬ
ಒಳರಚನೆಯನ್ನು ನಿಯಂತ್ರಿಸುವುದಾದರೆ, ಮತ್ತೊಂದು ಅವುಗ
ಅಂತರ ಸಂಬಂಧವನ್ನು ನಿಯಂತ್ರಿಸುವುದಾಗಿತ್ತು. ಈ ಕಟ್ಟಳೆಗ
ಬೆಳೆಯಲು ಬಹುಶಃ ಕೆಲವು ತಲೆಮಾರುಗಳೇ ಹಿಡಿದಿರಬೇಕ
ಇಂತಹ ಸಮಾಜದಲ್ಲಿ ಕೊಡಬಹುದಾದ ದೈಹಿಕ ಶಿಕ್ಷೆ ಉ
ವಾಗಿದ್ದು, ಕ್ರೂರವಾಗಿಯೂ ಇರುತ್ತಿತ್ತು. ಉದಾಹರಣೆ
ಕುದಿಯುವ ಎಣ್ಣೆಯಲ್ಲಿ ಕೈ ಅದ್ದುವುದು, ಬೆಣಚುಕಲ್ಲು ಫ
ಯನ್ನು ನುಂಗಿಸುವುದು, ಕಣ್ಣಿಗೆ ಖಾರದಪುಡಿ ಹಾಕುವುದ
ಅಂಗಚ್ಛೇದ ಮಾಡುವುದು, ಇವೇ ಮೊದಲಾದುವುಗಳು. ಕೆಲ
ಅಪರಾಧಗಳಿಗೆ ಮರಣದಂಡನೆಯನ್ನು ವಿಧಿಸಲಾಗುತ್ತಿತ್ತು.

ಸಾಮಾನ್ಯವಾಗಿ ಸಂಘಟಿತವಾದ ಸ್ಥಳೀಯ ಗುಂಪುಗ
ಏಕರೀತಿಯ ಧಾರ್ಮಿಕ ಪದ್ಧತಿ, ಸಂಪ್ರದಾಯ, ಸಾಮಾಜಿಕ

ಸಂಸ್ಕೃತಿಗಳುಳ್ಳವಾಗಿದ್ದುವು. ದಿನದ ಕೆಲಸದ ವೇಳೆ ಬಿಟ್ಟು, ಉಳಿದ ವಿರಾಮ ವೇಳೆಗಳಲ್ಲಿ ಒಂದು ಗುಂಪು ಮತ್ತೊಂದು ಗುಂಪಿನೊಂದಿಗೆ ಇತರೇ ಚಟುವಟಿಕೆಗಳಲ್ಲಿ ಭಾಗವಹಿಸಬಹುದಿತ್ತು. ಗುಂಪಿನ ಸದಸ್ಯರುಗಳು ಒಂದೇ ಪಂಗಡದವರಾಗಿದ್ದುದರಿಂದ ಹೆಚ್ಚಿನ ಘರ್ಷಣೆಗೆ ಅವಕಾಶವಿರಲಿಲ್ಲ.

ಕ್ರಮೇಣ ಈ ಗುಂಪುಗಳ ಆರ್ಥಿಕ ಸ್ಥಿತಿ ವ್ಯಾಪಕವಾಗಿ ಬೆಳೆದಂತೆಲ್ಲಾ, ಸದಸ್ಯರಿಗೆ ಸಮುದಾಯದ ಜೀವನ ನೆಮ್ಮದಿ ತಂದುಕೊಟ್ಟಿತು. ಅನೇಕ ಪಂಗಡಗಳಿಂದ ಕೂಡಿದ ಗುಂಪಿನ ಎಲ್ಲಾ ಸದಸ್ಯರುಗಳು ರಕ್ತಸಂಬಂಧಿಗಳಾಗಿದ್ದು, ಅವರು ಕುಟುಂಬದ ವಂಶಾವಳಿ ಸಾಹಸ, ಧೈರ್ಯಗಳ ಮಾನಕದಮೇಲೆ ಕೆಲವರನ್ನು ಗುರುತಿಸಿದ್ದುದರಿಂದ, ಕೆಲವು ಗುಂಪುಗಳು ತಮ್ಮದೇ ಆದ ನಾಯಕನನ್ನು ಹೊಂದಿರುತ್ತಿದ್ದುವು. ಮತ್ತೆ ಕೆಲವು ಗುಂಪುಗಳಿಗೆ ನಿರ್ದಿಷ್ಟ ನಾಯಕತ್ವವಿಲ್ಲದಿದ್ದರೂ, ಸಮುದಾಯದ ಬದುಕು ಅತ್ಯಂತ ವ್ಯವಸ್ಥಿತವಾಗಿತ್ತು. ಇಂಗ್ಲಿಷಿನಲ್ಲಿ ಇಂತಹ ಸಮಾಜಕ್ಕೆ ಇಗಲಿಟೇರಿಯನ್ ಸೊಸೈಟಿ ಅಥವಾ ಸಮುದಾಯ ಸಮಾಜ ಎಂದು ಕರೆಯುತ್ತಾರೆ.

ಆದರೆ ಕೆಲವು ಕಾರಣಗಳಿಂದಾಗಿ, ಅಂದರೆ,

(ಅ) ಧಾರ್ಮಿಕ

(ಆ) ವೈವಾಹಿಕ

(ಇ) ಆರ್ಥಿಕ

(ಈ) ವಾಣಿಜ್ಯ

ಇವೇ ಮೊದಲಾದ ಕಾರಣಗಳಿಂದ. ಒಂದು ಗುಂಪು ಮತ್ತೊಂದು ಗುಂಪಿನೊಂದಿಗೆ ಪರಸ್ಪರ ಸಂಪರ್ಕ ಹೊಂದಿ, ಬೇರೆ ಬೇರೆ ಎನಿಸಿದ ಗುಂಪುಗಳು ಒಂದಾಗಿ ಸಮುದಾಯದ ಸಮಾಜ

ಹುಟ್ಟಿಕೊಂಡಿತು. ಇಂತಹ ಸಮುದಾಯ ಜೀವನದಲ್ಲಿ ಸದಸ್ಯರ ಗಳ ಅಕಾಲ ಮರಣ, ವೃದ್ಧಾಪ್ಯ, ರೋಗರುಜಿನಗಳನ್ ಎದುರಿಸಲು ಗುಂಪು ಸದಾ ಸಿದ್ಧವಾಗಿರುತ್ತಿತ್ತು.

ಬಹು ಕಾಲದವರೆವಿಗೂ, ಅಪರಾಧಕ್ಕೆ ಅನೇಕ ಕಾಲ್ಪನಿ ವಿವರಣೆಗಳನ್ನು ನೀಡಲಾಗಿತ್ತು. ಅದು ಒಂದು ದುಷ್ಟ ಶ ಯಿಂದ ಪ್ರೇರಿತವಾದುದು. ಸ್ವಾಭಾವಿಕ ಕಾರಣಗಳಿಂದ ಎಂಬ ಭಾವನೆ ಜನರಲ್ಲಿ ಇನ್ನೂ ಮೂಡಿರಲಿಲ್ಲ. ಅಲ್ಲ ಅಪರಾಧವಲ್ಲದೆ ವರ್ತನೆ, ಅದರ ಹಿನ್ನೆಲೆ, ಉದ್ದೇಶ, ಸನ್ನಿವೇ ಪ್ರಚೋದನೆ, ಬದಲಾದ ಆರ್ಥಿಕ, ರಾಜಕೀಯ, ಸಾಮಾಜಿ ಪರಿಸ್ಥಿತಿಗಳ ವ್ಯವಸ್ಥೆಯೇ ಅಪರಾಧಕ್ಕೆ ಕಾರಣ ಎಂಬುದನ್ ವಿಶ್ಲೇಷಿಸುವುದರಲ್ಲಿ, ಆ ಕಾಲದ ಜನರಿಗೆ ಹೆಚ್ಚು ಆಸಕ್ತಿ ಇರಲಿಲ್ಲ ಹೀಗಾಗಿ ಅಪರಾಧಕ್ಕೆ ವಿಧಿಸುವ ಶಿಕ್ಷೆಯ ಕ್ರಮದಲ್ಲಿ ಹೆಚ ಬದಲಾವಣೆಯೂ ತೋರಿಬರಲಿಲ್ಲ. ಆದರೆ 20ನೇ ಶತಮಾನಕ ಎರಡು ಶತಮಾನಗಳ ಮುನ್ನ ಅಪರಾಧ ವಿಶ್ಲೇಷಣೆಯ ವೈಜ್ಞಾನಿಕವಾದ ಎರಡು ಹೊಸ ಪಂಥಗಳು ಪ್ರಪ್ರಥಮವಾ ಇಟಲಿ ದೇಶದಲ್ಲಿ ಹುಟ್ಟಿಕೊಂಡವು.

4. ಸಾಂಪ್ರದಾಯಿಕ ಪಂಥ

17ನೇ ಶತಮಾನದಲ್ಲಿ ನ್ಯಾಯಾಧೀಶರುಗಳು ನೀಡುತ್ತಿ ಕ್ರೂರ ಹಾಗೂ ಅವಿಚಾರ ಶಿಕ್ಷೆಯನ್ನು ವಿರೋಧಿಸಲು ಪಂಥವು ಹುಟ್ಟಿಕೊಂಡಿತು. ಆ ಕಾಲದಲ್ಲಿ ವ್ಯಕ್ತಿ ಮಾಡಿ ಅಪರಾಧಕ್ಕಿಂತ ಅಪರಾಧ ನಡೆದ ಸಮಾಜದಲ್ಲಿನ ಪರಿಸ್ಥಿತಿಗನ ಗುಣವಾಗಿ ಶಿಕ್ಷೆ ವಿಧಿಸುತ್ತಿದ್ದರು. ಹೀಗಾಗಿ ವಿಧಿಸುವ ಶಿಕ್ ಅಮಾನುಷವಾಗಿಯೂ ಇರುತ್ತಿತ್ತು. 1764ರಲ್ಲಿ ಇಟಲಿ ದೇಶ

ಸೀಜರ್ ಬೆಕರಿಯೊ ಎಂಬಾತನು "ಅಪರಾಧಗಳು ಮತ್ತು ಶಿಕ್ಷೆ" ಎಂಬ ವಿಷಯದ ಬಗ್ಗೆ ಒಂದು ದೊಡ್ಡ ಲೇಖನ ಬರೆದ. ಈ ಲೇಖನದಲ್ಲಿ ಅಪರಾಧದ ಕಾರಣ ಮತ್ತು ಅದನ್ನು ನಿಯಂತ್ರಿಸುವ ಕ್ರಮಗಳನ್ನು ವಿವರಿಸುತ್ತಾ, ಮಾನವನು ವಿವೇಚನಾಪರನು. ಅವನು "ಸ್ವಭಾವತಃ ಸುಖಾನ್ವೇಷಿ". "ವಿಧಿಸುವ ಶಿಕ್ಷೆಯ ನೋವಿಗಿಂತ ಅಪರಾಧದಿಂದ ದೊರಕಬಹುದಾದ ಸುಖಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡುತ್ತಾನೆ" ಎಂಬ ತತ್ವವನ್ನು ಸಾರಿದನು. ಇವನು ವಿಧಿಸುವ ಶಿಕ್ಷೆಯ ಕ್ರೂರತನವನ್ನು ತಗ್ಗಿಸಲು ಪ್ರಯತ್ನಿಸಿದನು. ಅವನು ಒಂದು ನಿರ್ದಿಷ್ಟವಾದ ಕಾನೂನಿನ ಉಲ್ಲಂಘನೆಗೆ ವ್ಯಕ್ತಿಯ ಲಿಂಗ, ವಯೋಮಾನಗಳ ಆಧಾರದಮೇಲೆ ಶಿಕ್ಷೆ ಕೊಡದೆ, ಏಕರೀತಿಯಲ್ಲಿ ಶಿಕ್ಷೆ ವಿಧಿಸಬೇಕೆಂದು ವ್ಯಾಖ್ಯಾನಿಸಿದನಾದರೂ, ಮಕ್ಕಳು, ಸಾಕಷ್ಟು ವಿವೇಚನಾಶಕ್ತಿ ಇಲ್ಲದ ಹುಚ್ಚರನ್ನು ಶಿಕ್ಷೆಯಿಂದ ಮುಕ್ತಗೊಳಿಸಿದ. ನ್ಯಾಯ ವಿತರಣೆಯಲ್ಲಿ ಅಪರಾಧಗಳನ್ನು ನಿಯಂತ್ರಿಸಲು ಕನಿಷ್ಟ ಮಿತಿಯ ಶಿಕ್ಷೆ ವಿಧಿಸುವುದರಿಂದ, ಅಪರಾಧಿಯನ್ನು ಸುಧಾರಣೆ ಮಾಡುವ ಸಾಧ್ಯತೆ ಇದೆ ಎಂದು ವಾದಿಸಿದನು.

ಬೆಕರಿಯೊ ತಜ್ಞನ ವಾದವನ್ನು ಪ್ರತಿಪಾದಿಸಿದ ಜೆರ್ಮಿ ಬೆಂಥಾಮ್ ಎಂಬ ಮತ್ತೊಬ್ಬ ತಜ್ಞನು, ಬೆಕರಿಯೊ ವಾದದಿಂದ ಸ್ವಲ್ಪ ದೂರ ಸರಿದು, "ಮಾನವ ಅಪರಾಧ ವರ್ತನೆಯಿಂದ ದೊರಕುವ ದುಃಖ ನೋವುಗಳಿಗಿಂತ, ಅದರಿಂದ ದೊರಕುವ ಸುಖಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡುತ್ತಾನೆ" ಎಂದು ವಾದಿಸಿದನು. ಅಪರಾಧದ ತೀವ್ರತೆಯನ್ನು ಅಳೆಯುವ ನ್ಯಾಯ ವಿತರಣೆಯ ಅಧಿಕಾರಿಗಳು, ಅಪರಾಧಿಯು ಯಾವ ಸನ್ನಿವೇಶದ ಒತ್ತಡಕ್ಕೆ ಒಳಗಾಗಿ ಕೃತ್ಯ ನಡೆಸಿದ ಎಂಬ ವಿಷಯವನ್ನು

ವೈಜ್ಞಾನಿಕವಾಗಿ ವಿಮರ್ಶಿಸಿ, ಶಿಕ್ಷೆ ವಿಧಿಸಬೇಕೆಂದು ವಾದಿ
ಸಿದನು.

5. ವಾಸ್ತವಿಕ ಪಂಥ

1800ರ ಅಂತ್ಯದಲ್ಲಿ ಇಟಲಿ ದೇಶದ (i) ಸೀಜರ
ಲೋಂಬ್ರೊಜೊ (ii) ಎನ್ರಿಕೊ ಫೆರಿ (iii) ರಫಯೆಲ
ಗಾರ್‌ಫಾಲೋ ಎಂಬ ಸಮಾಜ ಶಾಸ್ತ್ರಜ್ಞರುಗಳು, 'ಅಪರಾಧ'ದ
ಹೆಚ್ಚು ಆಸ್ಥೆಯನ್ನು ವಹಿಸಿ, ವಾಸ್ತವಿಕ ಪಂಥ ಎಂಬ ಹೊಸ
ಪಂಥವನ್ನು ಸಾರಿದರು.

(ಅ) ಸೀಜರ್ ಲೋಂಬ್ರೊಜೊ (1836–1909)

ಈತನ ವಾದದ ಪ್ರಕಾರ ಅಪರಾಧಿಯು ಸಾಮಾನ
ಮನುಷ್ಯನಿಗಿಂತ ಭಿನ್ನವಾದವನು. ಅವನು ದೈತ್ಯ ಮಾನವ
ಲಕ್ಷಣಗಳುಳ್ಳವನು. ಅಂದರೆ ಹಗುರವಾದ ಮೈ, ಕೋಳಿಮೊಟ್ಟೆ
ಯಾಕಾರದಂತ ತಲೆ, ಉಬ್ಬಿದ ಹಣೆ, ಚೂಪು ಗಡ್ಡ, ಇಲ್ಲವೆ
ಅಡ್ಡ ಮೂತಿ, ಗಂಟು ಮೂಗು, ಜಿಡ್ಡು ದೇಹವುಳ್ಳವನ
ಅಪರಾಧಿಯೆನಿಸಿಕೊಳ್ಳುತ್ತಾನೆ ಎಂದು ಸಾರಿದನು. ಈತನು ಸೆ
ಮನೆಯ ವೈದ್ಯನಾಗಿದ್ದಾಗ ಅನೇಕ ಬಂಧಿಗಳ ದೈಹಿಕ ಲಕ್ಷಣಗ
ಅಧ್ಯಯನ ನಡೆಸಿ ತನ್ನ ಸಿದ್ಧಾಂತವನ್ನು ಮಂಡಿಸಿದನು. ದೈತ
ಮಾನವನ ಲಕ್ಷಣಗಳನ್ನು ಹೊತ್ತು ಹುಟ್ಟಿದವನು "ಹುಟ್ಟಿದಂ
ನಿಂದ ಅಪರಾಧಿ" ಯಾಗುತ್ತಾನೆಂದು ವಾದಿಸಿದನು.

ಆದರೆ ಈ ವಾದವನ್ನು ಒಪ್ಪದ ಅನೇಕ ಸಮಾ
ಶಾಸ್ತ್ರಜ್ಞರು ಲೋಂಬ್ರೊಜೊರವರ ಸಿದ್ಧಾಂತ ನ್ಯೂನತೆಯಿಂ
ಕೂಡಿದೆ. ದೋಷಪೂರಿತ ಲಕ್ಷಣಗಳು ಅನೇಕ ಸಂಭಾವಿತರಲ್ಲ

ಕಂಡುಬರುತ್ತದೆ. ಹಾಗಾದರೆ ಅಂತಹವರನ್ನೆಲ್ಲಾ ಅಪರಾಧಿಗಳೆಂದು ಕರೆಯಲಾಗದು ಎಂದು 1913ರಲ್ಲಿ ಇಂಗ್ಲೆಂಡ್ ದೇಶದ ಚಾರ್ಲ್ಸ್ ಗೋರಿಂಗ್‌ರವರು ಲೋಂಬ್ರೋಜೋರವರ ವಾದವನ್ನು ಟೀಕಿಸಿದರು. ಅಪರಾಧ ಶಾಸ್ತ್ರದ 'ಪಿತಾಮಹ' ಎಂದೆನಿಸಿದ ಲೋಂಬ್ರೋಜೋರವರ ವಾದ ದೋಷಪೂರಿತವಾದದ್ದಾದರೂ, ಅವರ ವೈಚಾರಿಕ ಅಧ್ಯಯನ, ಅಪರಾಧಗಳನ್ನು ವೈಜ್ಞಾನಿಕವಾಗಿ ಅಧ್ಯಯನ ನಡೆಸಲು ಹೊಸ ಪೀಳಿಗೆಯ ತಜ್ಞರಿಗೆ ಪ್ರಚೋದನೆ ಕೊಟ್ಟಂತಾಯಿತು.

(ಆ) ಎನ್ರಿಕೊ ಫೆರಿ (1856-1929)

ಇಟಲಿ ದೇಶದ ಮತ್ತೊಬ್ಬ ಸಮಾಜಶಾಸ್ತ್ರಜ್ಞ ಎನ್ರಿಕೊ ಫೆರಿ ಎಂಬಾತನು, ಸಮಾಜವು ಅಪರಾಧಿಯನ್ನು ಶಿಕ್ಷಿಸುವ ಬದಲು, ಅಪರಾಧದಿಂದ ಮುಕ್ತಗೊಳಿಸುವ ಪ್ರಯತ್ನ ನಡೆಸಬೇಕೆಂದು ವಾದಿಸಿದನು. ಭೌಗೋಳಿಕ ಪರಿವಿಧಿ, ಹವಾಮಾನ, ಧಾರ್ಮಿಕ ಪದ್ಧತಿಗಳು ಅಪರಾಧಿಗಳಿಗೆ ಕಾರಣ ಎಂದು ವಾದಿಸಿದ ಈತನು ಅಪರಾಧಿಗಳ ಹೊಣೆ ಹೊತ್ತವರು ಅವರ ಮೇಲ್ವಿಚಾರಣೆ ಕಾರ್ಯವನ್ನು ನಿರ್ವಹಿಸುವಾಗ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಬೇಕೆಂದು ಹೇಳಿದನು. ಈತನು ಅಪರಾಧಿಗಳನ್ನು 5 ರೀತಿಯಾಗಿ ವರ್ಗೀಕರಿಸಿದನು. (i) ಹುಟ್ಟು ಅಪರಾಧಿ (ii) ಹುಚ್ಚು ಅಪರಾಧಿ (iii) ಅಭ್ಯಾಸಾನುಗತ ಅಪರಾಧಿ (iv) ಸಂದರ್ಭೋಚಿತ ಅಪರಾಧಿ ಮತ್ತು (v) ಪ್ರಭಾವಿತ ಅಪರಾಧಿ. ಎನ್ರಿಕೊ ಫೆರಿರವರು, "ಅಪರಾಧಶಾಸ್ತ್ರ" ಎಂಬ ಕಾನೂನಿನ ಪ್ರಕಾರ ಸಾಮಾಜಿಕ ವ್ಯವಸ್ಥೆಗೆ ಅನುಗುಣವಾಗಿ ಬದಲಾಗತಕ್ಕದ್ದು ಎಂದೂ ಹೇಳಿದ್ದಾರೆ.

(ಇ) ರಫಾಯೆಲ್ ಗಾರ್‌ಫಾಲೋ (1852-1934)

ಲೋಂಬ್ರೂಜೊ ಮತ್ತು ಫೆರಿಯುವರ ಜಾಡು ಹಿಡಿದ ಗಾರ್‌ಫಾಲೋರವರು ಅಪರಾಧವನ್ನು ಅರ್ಥಮಾಡಿಕೊಳ್ಳಲು ವೈಜ್ಞಾನಿಕ ವಿಧಾನಗಳಿಂದ ಮಾತ್ರ ಸಾಧ್ಯ ಎಂದು ವಾದಿಸಿದನು. ಈತನು ವ್ಯಕ್ತಿಯು ಅಪರಾಧ ವರ್ತನೆಗೆ ಅವನಲ್ಲಿ ಅಂಕುರಿಸಿರುವ ಅಪರಾಧದ ಗೀಳು ಮತ್ತು ವ್ಯಕ್ತಿ ವಾಸಿಸುವ ಪ್ರತ್ಯಾವರಣ ವನ್ನಾಧರಿಸಿದ್ದು. ಆದುದರಿಂದ ವ್ಯಕ್ತಿಯು ಜೈವೀಕತೆ, ಅವನು ಹುಟ್ಟಿ ಬೆಳೆದ ಪ್ರತ್ಯಾವರಣದ ಫಲಿತಾಂಶಗಳು ಅವನ ಅಪರಾಧದ ವರ್ತನೆಗೆ ಕಾರಣ ಎಂದು ವಾದಿಸಿದನು.

ಒಟ್ಟಾರೆ ಹೇಳುವುದಾದರೆ, ವಾಸ್ತವಿಕ ಪಂಥದ ಅಪರಾಧ ಶಾಸ್ತ್ರಜ್ಞರು ಅಪರಾಧಕ್ಕಿಂತ 'ಅಪರಾಧಿ' ಹಾಗೂ ಅವನ ವರ್ತನೆಯು ಬಗ್ಗೆ ಹೆಚ್ಚು 'ಪ್ರಾಶಸ್ತ್ಯ' ಕೊಟ್ಟರು.

೩. ಆಧುನಿಕ ಕಾಲದ ಅಪರಾಧ ಸಿದ್ಧಾಂತಗಳು

20ನೇ ಶತಮಾನದ ನವೀನ ಅಪರಾಧ ಶಾಸ್ತ್ರ

ಲೋಂಬ್ರೂಜೊರವರು ಅನುಸರಿಸಿದ ಆಧಾರದ ಮೇಲೆ ಡಾ. ಚಾರ್ಲ್ಸ್‌ಗೋರಿಂಗ್‌ರವರು ದೈಹಿಕ ಲಕ್ಷಣಗಳಿಗೆ ಬದಲಾಗಿ ಮಾನಸಿಕ ದೌರ್ಬಲ್ಯಕ್ಕೆ ಪ್ರಾಧಾನ್ಯತೆಯನ್ನು ಕೊಟ್ಟು, ಅಪರಾಧಿಯು ಚಿಂತನೆ ಮತ್ತು ಭಾವನೆಗಳು, ಸಾಮಾನ್ಯ ಮನುಷ್ಯ ನಿಂದ ವಿಭಿನ್ನವಾದವುಗಳು. ಸಮಾಜದಲ್ಲಿನ ಸ್ಥಿತ್ಯಂತರಗಳೇ ಅಪರಾಧ ವರ್ತನೆಗೆ ಕಾರಣವೆಂದು ವಾದಿಸಿದನು. ಇದರಿಂದಾಗಿ ಎರಡು ಹೊಸ ಪಂಥಗಳು ಹುಟ್ಟಿಕೊಂಡವು.

1. ಬುದ್ಧಿಶಕ್ತಿಯ ಪರೀಕ್ಷಾ ಸಿದ್ಧಾಂತ

ಎಡ್ವರ್ಡ್ ಗೋಡಾರ್ಡ್ ಎಂಬಾತನು ಈ ಪಂಥದ ಗುರು. ಈತನು ಮೆಂಡಲೀಸ್ ತತ್ತ್ವದ ಆಧಾರದ ಮೇಲೆ, ವಂಶ ವಾಹಿನಿಯಾಗಿ ಬಂದ ದುರ್ಬಲ ಚಿತ್ತವುಳ್ಳವರು ಅಪರಾಧಿಗಳಾಗುತ್ತಾರೆ ಎಂದು ಸಾರಿದನು. ಆದರೆ ಅನೇಕ ಸಂಭಾವಿತರು, ದುರ್ಬಲಚಿತ್ತರು ಅವರನ್ನೆಲ್ಲಾ ಅಪರಾಧಿಗಳೆಂದು ಕರೆಯಲಾಗು ವುದು, ಎಂಬುದು ಈ ವಾದದ ನ್ಯೂನತೆಯಿಂದ ಬುದ್ಧಿ ಅಥವಾ ದುರ್ಬಲ ಚಿತ್ತವೇ ಕಾರಣವೆಂಬ ವಾದವನ್ನು ಅಲ್ಲಗಳೆದ ಕಾರಲ್ ಮಾರಿಚಿಸನ್ ಎಂಬ ಅಮೆರಿಕಾದ ಮತ್ತೊಬ್ಬ ಮನಶಾಸ್ತ್ರಜ್ಞನು ಕಾರಾಗೃಹ ಮತ್ತು ಸುಧಾರಣಾ ಗೃಹಗಳಲ್ಲಿನ ಬಂಧಿಗಳ ಬುದ್ಧಿಯನ್ನು, ಸೇನಾದಳದ ಜನರೊಂದಿಗೆ ಹೋಲಿಸಿ ನಡೆಸಿದ ಸಮೀಕ್ಷೆಗಳಿಂದ, ಅಪರಾಧ ವರ್ತನೆಗೆ ಮಾನಸಿಕ ದುರ್ಬಲತೆ ಕಾರಣವಲ್ಲ ಎಂದು ಸಾರಿದನು.

2. ಮನೋವೈದ್ಯಕೀಯ ಪಂಥ

ಲೋಂಬ್ರೋಜೋರವರ ವಾದಸರಣಿಯನ್ನು ವಿಸ್ತರಿಸಿದ ಮತ್ತೊಂದು ಗುಂಪಿನವರು, ಮನೋ ವ್ಯಾಕುಲದಿಂದ ನರಳುವ ವ್ಯಕ್ತಿ ಅಪರಾಧ ಕೃತ್ಯ ಮಾಡುತ್ತಾನೆ ಎಂದು ಸಾರಿದರು. ಆದರೆ ವ್ಯಕ್ತಿ ಮಾಡಿದ ಅಪರಾಧಗಳೆನಿಸಿದ ಕಳುವಿನ ಉನ್ಮಾದ, ಬೆಂಕಿಯ ಉನ್ಮಾದ ಮತ್ತು ಹಣಕಿಕ್ಕುವುದು ಇವೇ ಮೊದಲಾದ ಅಪರಾಧಗಳನ್ನು ಮಾಡುವವರು ಮನೋಬೇನೆಗೊಳಗಾದವರು ಎಂದು ವಾದಿಸುವುದಕ್ಕೆ ಸಾಕಷ್ಟು ಆಧಾರಗಳಿಲ್ಲ ಎಂದು ಮತ್ತೆ ಕೆಲವರು ವಾದಿಸಿದರು.

ಇದೇ ಪ್ರಕಾರವಾಗಿ ಪ್ರಬಲ ಮನೋವಿಕಾರಗಳಿ

ಗೊಳಗಾದ, ನ್ಯೂಯಾರ್ಕ್ ನಗರದ ಮತ್ತು ಇಲಿನಾಯ್ಸ್ ನಗರದ ಬಂಧಿಗಳಮೇಲೆ ನಡೆಸಲಾದ ಅನೇಕ ಸಿದ್ಧಾಂತಗಳಿಂದ ಸಾಮಾನ್ಯ ಜನರಲ್ಲಿ ಕಂಡುಬರುವ ಬುದ್ಧಿ ಪ್ರಮಾಣಕ್ಕಿಂತ ಈ ಬಂಧಿಗಳಲ್ಲಿ ಕಂಡುಬರುವ ಬುದ್ಧಿಮಟ್ಟದಲ್ಲಿ ಹೆಚ್ಚಿನ ಪ್ರಮಾಣದ ವ್ಯತ್ಯಾಸ ವೇನೂ ಕಂಡುಬರಲಿಲ್ಲವೆಂದು ಹೇಳಿದ ಕಾರಲ್ ಮಾರ್ಚಿಸನ್ ರವರು, ಅನುವಂಶೀಯುವಲ್ಲದ ಮಾನಸಿಕ ವರ್ತನೆ ಸಾಮಾಜಿಕ ಪ್ರತಿಕ್ರಿಯೆಯಿಂದ ಉಂಟಾದುವುಗಳು ಎಂದು ಸಾರಿದನು.

ಈ ಪಂಥದವರು ಕೂಡ ಮನೋವಿಜ್ಞಾನದ ಪಿತಾ ಮಹನೆಂದೆನಿಸಿದ 'ಫ್ರಾಯಿಂಡ್'ನ ಲೇಖನದಿಂದ ಪ್ರಭಾವಿತ ರಾದವರು. ಅಪರಾಧ ವರ್ತನೆಯುಮೇಲೆ ವ್ಯಾಖ್ಯಾನಿಸಿದ ಎಡ್‌ಮಂಡ್ ಫ್ರಾಯಿಡನು ತನ್ನ ಪುಸ್ತಕದಲ್ಲಿ ಈ ರೀತಿ ವಿವರಿಸಿ ದ್ದಾನೆ :

ಸಮಾಜದ ವಿವಿಧ ರೀತಿಯು, ನೀತಿ ನಿಬಂಧನೆಗಳು ವ್ಯಕ್ತಿಯ ವರ್ತನೆಯುನ್ನು ನಿಯಂತ್ರಿಸುತ್ತದೆ. ಅವನ ಮನಸ್ಸಿನ ಅಂತರಾಳ ದಲ್ಲಿನ ಅನೇಕ ಆಸೆ–ಆಕಾಂಕ್ಷೆಗಳನ್ನು, ಸಮಾಜ ತನ್ನ ನಿರ್ಬಂಧದ ಒತ್ತಡವನ್ನು ಹೇರಿ ಮರ್ಧಿಸುತ್ತದೆ. ಹಾಗೆಯೇ ವ್ಯಕ್ತಿ ಮಗು ವಾಗಿದ್ದಾಗ ಅವನ ಸಹಜ ಬೆಳವಣಿಗೆಯಲ್ಲಿ ಅದಕ್ಕೆ ಸಿಗಬೇಕಾದ ಮೃದು ಪ್ರೀತಿ, ವಾತ್ಸಲ್ಯ, ಕರುಣೆ, ಸಹನೆ, ಸೌಜನ್ಯತೆ, ಇವೇ ಮೊದಲಾದುವುಗಳು ದೊರಕದಿದ್ದಾಗ, ಅಂತಹ ವಂಚಿತ ಮಗುವು ದೊಡ್ಡದಾದಮೇಲೆ ಮನಸ್ಸಿನಲ್ಲಿ ಒತ್ತರಿಸಲ್ಪಟ್ಟ ಅದರ ಪ್ರತಿ ಕ್ರಿಯೆಗಳು ಒಮ್ಮೆಗೇ 'ಭುಗಿಲ್' ಎಂದು ಸಿಡಿದೆದ್ದು, ಲೈಂಗಿಕತೆ, ಕಳವು, ಹಿಂಸಾಚಾರ, ಇವೇ ಮೊದಲಾದ ಅಪರಾಧ ವರ್ತನೆಯಲ್ಲಿ ಕೊನೆಗೊಳ್ಳುತ್ತದೆ, ಆದುದರಿಂದ ಅಪರಾಧ ವರ್ತನೆಯು ವ್ಯಕ್ತಿ ಒಂದು ರೀತಿಯ ಮಾನಸಿಕ ಗೊಂದಲಕ್ಕೊಳಗಾದವನು.

ಈತನು 'ಈಡಿಪಸ್ ಕಾಂಪ್ಲೆಕ್ಸ್' ಎಂಬ ತಾಯಿ ಮಗುವಿನ ಒಂದು ವಿಶಿಷ್ಟ ಸಂಬಂಧವನ್ನು ವಿವರಿಸುತ್ತಾ, ಮಗುವು ಚಿಕ್ಕತನದಲ್ಲಿ ತಾಯಿಯನ್ನು ಲೈಂಗಿಕವಾಗಿ ಪ್ರೀತಿಸುತ್ತದೆ. ತಾಯಿಯ ಲೈಂಗಿಕತೆಯನ್ನು ಬಯಸುವ ಗಂಡು ಮಗು ತಂದೆಯನ್ನು ದ್ವೇಷಿಸುತ್ತದೆ ಎಂದು ವ್ಯಾಖ್ಯಾನಿಸಿದ್ದಾನೆ.

ಸಾಮಾಜಿಕ ಪ್ರತಿಕ್ರಿಯೆಗಳಿಂದ ಪ್ರಭಾವಿತಗೊಳ್ಳುವ ಮಾನಸಿಕ ವರ್ತನೆಯನ್ನು ' ಐಕರನ್ ' ಎಂಬ ಮತ್ತೊಬ್ಬ ತಜ್ಞನು ಹೀಗೆ ವಿವರಿಸಿದ್ದಾನೆ. ಶೈಶಾವಸ್ಥೆಯಲ್ಲಿನ ಮಗುವಿಗೆ ಅದರ ಬೆಳವಣಿಗೆಯಲ್ಲಿ ಸಮಾಜದೊಂದಿಗೆ ಹೊಂದಿಕೊಳ್ಳುವಂತಹ ಒಳ್ಳೆಯ ಶಿಕ್ಷಣವನ್ನು ನೀಡದಿದ್ದರೆ, ಅದು ಸಮಾಜದ ನಿಜ ಪರಿಸ್ಥಿತಿಗೆ ಹೊಂದಿಕೊಳ್ಳಲಾರದೆ ಹಾಗೂ ಕುಟುಂಬದ ಅನಾದರಣೆಯಿಂದ, ಚೋರ ಗುಂಪಿನ ಸಂಸ್ಕೃತಿಯನ್ನು ಸಂಪರ್ಕಿಸಿ ಅಪರಾಧ ವರ್ತನೆಗೆ ಬಲಿಯಾಗುತ್ತದೆ ಎಂದು ವಾದಿಸಿದ್ದಾನೆ.

3. ಅನುವಂಶೀಯತೆ

ಅಪರಾಧ ವರ್ತನೆಗೆ ಅನುವಂಶೀಯತೆಯೇನಾದರೂ ಕಾರಣವೇ ಅಥವಾ ಅಲ್ಲವೇ ಎಂಬುದಕ್ಕೆ ಅಮೇರಿಕಾದ ಮನಃಶಾಸ್ತ್ರಜ್ಞ ಆರ್. ಎಲ್. ಡಗ್‌ಡೇಲ್ ಮತ್ತು ಎಸ್ಟಾಬ್ರೂಕ್ ಎಂಬ ವಿದ್ವಾಂಸರುಗಳು, ಅಮೆರಿಕಾದ ಜೂಕ್ಸ್ ಎಂಬ ಕ್ಷೀಣಿಸುವ ಮತ್ತು ಜೋನಾಥನ್ ಎಡ್ವರ್ಡ್ ಎಂಬ ಮುಂದುವರೆದ ಎರಡು ಪ್ರಖ್ಯಾತ ವಂಶಾವಳಿಗಳ ಮೇಲೆ ಸಮೀಕ್ಷೆ ನಡೆಸಿದರು.

ಜೂಕ್ಸ್ ಕುಟುಂಬದ 1200 ಸದಸ್ಯರುಗಳಲ್ಲಿ, 140 ಮಂದಿ ಅಪರಾಧಿಗಳು, 7 ಮಂದಿ ಕೊಲೆಗಡುಕರು, ಗಲ್ಲಿಗೇರಿಸ

ಲ್ಪಟ್ಟರೆ, 60 ಮಂದಿ ಚೋರರೆನಿಸಿದ್ದರು. 50 ಮಂದಿ ಸ್ತ್ರೀಯರು
ವೇಶ್ಯೆಯರು ಆಗಿದ್ದರು.

ಆದರೆ ಎಡ್ವರ್ಡ್‌ರ ಕುಟುಂಬದಲ್ಲಿ ಯಾರೂ ಅಪರಾಧಿ
ಗಳಾಗಿರಲಿಲ್ಲ. ಈ ಕುಟುಂಬದಲ್ಲಿ ಅನೇಕರು ಸಂಯುಕ್ತ ಸಂಸ್ಥಾನದ
ರಾಷ್ಟ್ರಪತಿ, ರಾಜ್ಯಪಾಲ, ನ್ಯಾಯಾಧೀಶ, ಲೇಖಕ, ಪ್ರಾಧ್ಯಾಪಕರು
ಗಳು ಆಗಿದ್ದರು.

ಅವರು ನಡೆಸಿದ ಸಮೀಕ್ಷೆಯಿಂದ ಅಪರಾಧ ವರ್ತನೆಯು
ದುಷ್ಟ ಚಾಳಿಯು ಅಥವಾ ದುರ್ಬಲ ಮನಸ್ಸಿನ ಮೂಲಪುರುಷ
ನಿಂದ ವಂಶವಾಹಿನಿಯಾಗಿ ಹರಿದು ಬಂದಿದ್ದು ಎಂದು ವಾದಿ
ಸಿದರು.

ಮೊದಮೊದಲಿಗೆ ಈ ಸಿದ್ಧಾಂತಗಳು ವಿಶ್ವಾಸನೀಯವಾದ
ದಾದರೂ, ಬರುಬರುತ್ತಾ ಅವು ತಿರುಳಿಲ್ಲದ್ದು, ಅವುಗಳಿ
ಮಾನ್ಯತೆ ನೀಡಲಾಗುವುದಿಲ್ಲವೆಂದು ಸಾರಿ, ಆ ಸಿದ್ಧಾಂತಗಳ
ಅಪರಾಧ ಶಾಸ್ತ್ರದಮೇಲೆ ಅಧ್ಯಯನ ನಡೆಸುವ ವಿದ್ಯಾರ್ಥಿಗ
ಐತಿಹಾಸಿಕ ದಾಖಲೆಗಳ ಗುಂಪಿಗೆ ಸೇರಿಕೊಂಡವು.

ಅನುವಂಶೀಯತೆಗೂ ಮತ್ತು ಅಪರಾಧಕ್ಕೂ ಕಾರ್ಯ-
ಕಾರಕ ಸಂಬಂಧವನ್ನು ಕಂಡುಹಿಡಿಯುವ ಮತ್ತೊಂದು ವಿಧಾ
ವನ್ನು 'ಜೋಹಾನ್ಸ್ ಲಾಂಗೆ' ಎಂಬ ಮತ್ತೊಬ್ಬ ತಜ್ಞನ
ಪ್ರಯುಕ್ತಿಸಿದನು. ಈತನು ಏಕಬೀಜಾಣುವಿನ ಸಮ ಅವಳಿ
ದ್ವಿಬೀಜಾಣುವಿನ ಸೋದರ ಅವಳಿ ಮಕ್ಕಳ ಮೇಲೆ ಸಂಶೋಧ
ನಡೆಸಿ, ಅಪರಾಧ ವರ್ತನೆಗೆ ಅನುವಂಶೀಯತೆ ಕಾರಣವಲ್ಲ
ಅದು ಅವರು ಹುಟ್ಟಿ ಬೆಳೆಯುವ ಪ್ರತ್ಯಾವರಣವೇ ಕಾರಣ
ಎಂದು ವಾದಿಸಿದನು.

4. ಬಹು ಅಂಶಗಳ ಸಿದ್ಧಾಂತ

ಇದುವರೆವಿಗೂ ವಿವರಿಸಿದ ಪಂಥಗಳು, ಒಂದೊಂದೇ ಅಂಶದಿಂದ ಅಪರಾಧ ವರ್ತನೆಗೆ ಕಾರಣಗಳನ್ನು ವಿಶ್ಲೇಷಿಸಿದವು. ಆದರೆ ಅಪರಾಧಗಳು ಅನೇಕ ಕಾರಕಾಂಶಗಳ ಜೊತೆಗೂಡುವಿಕೆ ಯಿಂದ ಆಗುವಂತಾದ್ದು ಎಂದು ಬಹು ಅಂಶಗಳನ್ನು ಗುರುತಿಸಿದ ವಿಲಿಯಂ ಹೀಲಿಯಂವರು ವಾದಿಸಿದರು. ಒಂದು ಗುಂಪಿನ ಅಂಶಗಳು ಒಂದು ರೀತಿಯ ಅಪರಾಧಕ್ಕೆ ಕಾರಣವಾದರೆ ಮತ್ತೊಂದು ಗುಂಪಿನ ಅಂಶಗಳು ಇನ್ನೊಂದು ರೀತಿಯ ಅಪರಾಧಕ್ಕೆ ಕಾರಣ ಎಂದು ಸಾರಿದರು. ಈ ಪಂಥದವರ ಪ್ರಕಾರ ಪ್ರತಿಯೊಂದು ಅಂಶವೂ ವ್ಯಕ್ತಿಯ ಅಪರಾಧ ವರ್ತನೆಯ ಕಡೆಗೆ ಸೆಳೆಯುವುದಲ್ಲದೆ ಅಪರಾಧ ಮಾಡುವ ಶಕ್ತಿಯುಳ್ಳದ್ದು ಎಂದು ವಾದಿಸಿದರು. ಈ ಸಿದ್ಧಾಂತದ ಯಾವ ಅಂಶ ಯಾವ ಅಪರಾಧಕ್ಕೆ ಎಷ್ಟು ಪ್ರಮಾಣದ ಪಾತ್ರವನ್ನು ವಹಿಸುತ್ತದೆ ಹಾಗೂ ಅದನ್ನಳತೆಮಾಡಲು ವಿಫಲಗೊಂಡಿತು. ಈ ಕಾರಣ ದಿಂದ ಬಹು ಅಂಶಗಳ ತತ್ವ ಅಪರಾಧ ಕಾರಣಗಳನ್ನು ಸಂಪೂರ್ಣ ವಾಗಿ ವಿವರಿಸುವುದಿಲ್ಲ ಎಂದು ಹೇಳಿ ಅನೇಕರು ಈ ಸಿದ್ಧಾಂತ ವನ್ನು ತಳ್ಳಿಹಾಕಿದರು.

5. ಸಾಮಾಜಿಕ ಮತ್ತು ಸಮಾಜ ಮನೋವೈಜ್ಞಾನಿಕ ಪಂಥ

ಈ ಪಂಥವನ್ನು 1915ರಲ್ಲಿ ಹ್ಯಾಮಲ್ ಮತ್ತು ಲೋಂಬ್ರೂಸೊರವರ ಸಮಕಾಲೀನ ಫ್ರೆಂಚ್ ಸಮಾಜಶಾಸ್ತ್ರಜ್ಞ ಹಾಗೂ ನ್ಯಾಯಶಾಸ್ತ್ರಜ್ಞನಾದ ಗೇಬ್ರಿಯಲ್ ಟಾರ್ಡೆರವರು ಪ್ರತಿಪಾದಿಸಿದರು. ಈ ಪಂಥದಲ್ಲಿ ಅನೇಕ ಪ್ರಭೇದಗಳಿವೆ. ಇವರು ಸಾಮಾಜಿಕ ದೃಷ್ಟಿಯಿಂದ ಅಪರಾಧ ಕಾರಣ

ಗಳನ್ನು ಅದರ ಸ್ವರೂಪವನ್ನು ಕಂಡುಹಿಡಿಯಲು ಪ್ರಯತ್ನಿ ಸಿದರು.

ಚೋರತ್ವದ ಸಂಪರ್ಕವಿಲ್ಲದ, ವ್ಯಕ್ತಿತ್ವದ ಒಂದು ಭಾಗವು ಸಾಮಾಜಿಕ ಸ್ಥಿತ್ಯಂತರಗಳನ್ನು ಉಪೇಕ್ಷಿಸಿದ ಅಪರಾಧ ವರ್ತನೆಯ ಇತರೇ ವ್ಯಕ್ತಿಗಳಂತೆ ಅಪರಾಧವನ್ನು ಒಂದು ಕಸುಬಾಗಿ ಮಾಡಿ ಕೊಳ್ಳಲು ಪ್ರೋತ್ಸಾಹಿಸುತ್ತದೆ.

ವ್ಯಕ್ತಿಯು ತನ್ನ ಪ್ರತ್ಯಾವರಣದಲ್ಲಿ ಸಂಪರ್ಕಿಸಬಹುದಾದ ಚೋರಸಂಸ್ಕೃತಿಯ ಅನುಕರಣೆಯೇ ಅಪರಾಧ ವರ್ತನೆ ಕಾರಣ. ಅಂದರೆ ಸಾಮಾಜಿಕ ಒಳ ಪ್ರತ್ಯೇಕಗಳಲ್ಲಿ, ಸಾಮಾನ ಆವಶ್ಯಕತೆಗಳ ಕಡೆಗೆ ವ್ಯಕ್ತಿ ಸೂಚಿಸುವ ಅನುಕ್ರಿಯೆಯ ಅನುಕರಣೆ ಎಂದು ಹೇಳಬಹುದು.

ಈ ಪಂಥದವರ ಪ್ರಕಾರ ಇತರ ಸಾಮಾಜಿಕ ವರ್ತನೆ ಯಂತೆ ಅಪರಾಧ ವರ್ತನೆಯೂ ಒಂದು ಎಂದು ಸಾರಿದರು.

ಇತ್ತೀಚಿನ ವರ್ಷಗಳಲ್ಲಿ ಸಾಮಾಜಿಕ ಸಿದ್ಧಾಂತದವರ ಪೈಕಿ ಅಪರಾಧ ವರ್ತನೆಯ ಮೇಲೆ ಪ್ರಬಲವಾದ ಹಾಗೂ ಅನೇ ತಜ್ಞರು ಒಪ್ಪಿಕೊಂಡಿರುವ ಅತ್ಯಂತ ಸಮೀಪವಾದ ವಿವರಣೆ ಯನ್ನು ನೀಡಲು ಪ್ರಯತ್ನಿಸಿದವರೆಂದರೆ ಅಮೆರಿಕಾದ ಎಡ್ವಿನ್ ಎಚ್. ಸದರ್‌ಲ್ಯಾಂಡ್‌ರವರು. ಅವರ ಸಿದ್ಧಾಂತಕ್ಕೆ 'ಗುಣವೈಖ ಸಂಬಂಧ' ತತ್ವವೆಂದು ಹೆಸರು.

ಈತನು ಅಪರಾಧ ವರ್ತನೆಯು ಕಲಿತದ್ದು, ಅದ ಕುಟುಂಬದ ಬಳುವಳಿಯಲ್ಲ ಅಥವಾ ಅನುವಂಶೀಯತೆಯಿಂ ಬಂದುದಲ್ಲ. ಪರಸ್ಪರ ಸಂಪರ್ಕ ಪ್ರತಿಕ್ರಿಯೆಯಿಂದ ಕೂಡಿದುದ ಅದು ಅನುಕರಣೆಯಿಂದ ಕಲಿತದ್ದು.

ವ್ಯಕ್ತಿಯನ್ನು ಅಪರಾಧಿಯಾಗಲು ಪ್ರೇರೇಪಿಸುವುದ

ಕಾನೂನು ಉಲ್ಲಂಘಿಸುವುದರ ಪ್ರತಿಕೂಲಕ್ಕಿಂತ, ಅದನ್ನು ಉಲ್ಲಂಘಿಸಲು ಸಹಕರಿಸುವ ಅಂಶಗಳೇ ಕಾರಣ ಎಂದು ಸಾರಿದನು.

ಸಭ್ಯವರ್ತಿಯಾಗಿ ತನ್ನ ಅವಶ್ಯಕತೆಗಳನ್ನು ಈಡೇರಿಸಿ ಕೊಳ್ಳಲು, ಮೌಲ್ಯವನ್ನು ಉಳಿಸಿಕೊಳ್ಳಲು ಹಾಗೂ ಸಮಾಜ ದೊಂದಿಗೆ ಸಹಕರಿಸಿ ಗೌರವಾನ್ವಿತ ಬದುಕು ಮಾಡಲು, ವ್ಯಕ್ತಿಗೆ ವಿವಿಧೋದ್ದೇಶದ ಅನೇಕ ಸಂಘ ಸಂಸ್ಥೆಗಳಿಂದ ಕೂಡಿದ ಕಲೆ, ಕಸುಬು, ವಿದ್ಯೆ, ಸಂಸ್ಕೃತಿ ಹೇಗೆ ಸಹಕರಿಸುತ್ತವೆಯೋ ಹಾಗೆಯೇ ಸಮಾಜದ ಅವ್ಯವಸ್ಥೆಯಿಂದ ವ್ಯಾಪಕವಾಗಿ ಹಬ್ಬಿಕೊಂಡ ತನ್ನದೇ ಆದ ಧ್ಯೇಯೋದ್ದೇಶಗಳಿಂದ ಕೂಡಿರುವ ಸಂಘ ಸಂಸ್ಥೆಗಳು ಹೊಸ ಮೌಲ್ಯಗಳಿಂದ ಕೂಡಿದ ಅಧಿಸಂಸ್ಕೃತಿ ಮತ್ತು ಅವುಗಳಿಂದ ಸ್ಫೋಟಗೊಂಡ ಕಾನೂನನ್ನು ಸುಲಭವಾಗಿ ಉಲ್ಲಂಘಿಸಲು ಸಹಕರಿಸುವ ಅನೇಕ ವಿಧವಾದ ಕಸುಬುಗಳು, ವ್ಯಕ್ತಿಯನ್ನು ತನ್ನ "ಗುಣ ವೈಖರಿ" ಸಂಪರ್ಕದಿಂದ ಅಪರಾಧ ವರ್ತನೆಯ ಕಡೆಗೆ ಪ್ರಚೋದಿಸುತ್ತದೆ ಎಂದು ವಾದಿಸಿದನು.

೪. ನಾಗರಿಕ ಸಮಾಜದ ರಚನೆ ಮತ್ತು ಅಪರಾಧ

'ಅಪರಾಧ'ದ ಮೇಲೆ ಹೊಸ ಬೆಳಕನ್ನು ಚೆಲ್ಲಿ ಸಾಮಾಜಿಕ ರಚನೆಯೇ ಅಪರಾಧದ ಹೆಚ್ಚಳಕ್ಕೆ ಕಾರಣ ಎಂದು ಒತ್ತಿ ಹೇಳಿವೆ. ಪೂರ್ವ ಸಮಾಜದಲ್ಲಿನ ಮಾನವನು ನೆಲದ ಸ್ಥಿರತೆಗೆ ಅಂಟಿಕೊಂಡಿದ್ದವನಾಗಿದ್ದು, ತನ್ನ ಪ್ರಾಮಾಣಿಕ ಸಂಪಾದನೆಯಲ್ಲಿ ಸುಖಸಂತೋಷಗಳನ್ನು ಕಂಡುಕೊಂಡು ಸಂತೃಪ್ತನಾಗಿದ್ದ. ಅವನು ಜೀವನದಲ್ಲಿ ಎದುರಿಸಬೇಕಾದ ಕೆಲವೇ ಸೋಲುಗಳಿಂದ ಹತಾಶ ನಾಗಿರಲಿಲ್ಲ. ಆದರೆ ಔದ್ಯೋಗಿಕ ಮತ್ತು ಪ್ರಜಾತಾಂತ್ರಿಕ

ಕ್ರಾಂತಿಯಿಂದ ಸಮಾಜದ ರಚನೆಯು ಬದಲಾಗಿ, ಅದರಲ್ಲಿ ವ್ಯವಸ್ಥೆಯೂ ಅಸ್ತವ್ಯಸ್ತಗೊಂಡು ವ್ಯಕ್ತಿ ಜೀವನದಲ್ಲಿ ಗೊಂದ ವನ್ನೆಬ್ಬಿಸಿತು. ನಾಗರಿಕ ಸಮಾಜದ ರೀತಿ ನೀತಿಗಳು, ಬದು ಶೈಲಿ, ಜೀವನದ ಮೌಲ್ಯಗಳು, ಅದಕ್ಷತೆ, ಬಡತನ. ಅತಿ ವೇಗ ಸಂಚರಣೆ, ನಗರಗಳಲ್ಲಿನ ಉದ್ಯೋಗಾವಕಾಶ, ಉಲ್ಬಣಿಸಿ ಜನಸಾಂದ್ರತೆ, ಆವಶ್ಯ ವಸ್ತುಗಳ ಕೊರತೆ, ಸ್ಥಳಾವಕಾಶವಿಲ್ಲ ಮೂಲ ನಾಗರಿಕ ಸೌಲಭ್ಯಗಳಿಲ್ಲದೆ ಬೆಳೆದು ನಿಂತ ಕೊ ಪ್ರದೇಶಗಳು, ಇವೇ ಮೊದಲಾದ ಅಪರಾಧ ಹೆಚ್ಚಳದ ಕಾರ ಗಳನ್ನು ಈ ಕೆಳಗೆ ವಿವರಿಸಲಾಗಿದೆ,

1. ಔದ್ಯೋಗಿಕ ಕ್ರಾಂತಿ

18ನೇ ಶತಮಾನದಲ್ಲಿ ನಡೆದ ಫ್ರೆಂಚರ ಕ್ರಾಂತಿ, ವಿಶ್ವದ ಮೊದಲ ಬಾರಿಗೆ "ಸ್ವತಂತ್ರತೆ, ಸಮಾನತೆ ಮತ್ತು ಭ್ರಾತೃತ್ವ" ಕಹಳೆಯೂದಿತು. ಇದು 1789ರಲ್ಲಿ ಯೂರೋಪಿನ ಔದ್ಯೋಗಿಕ ಕ್ರಾಂತಿಗೆ ನಾಂದಿಯಾಯಿತು. ವೈಯ ಸ್ವಾತಂತ್ರ್ಯದ ಕೂಗಿನ ಹಿನ್ನೆಲೆಯಲ್ಲಿ, ಮಾನವನ ಬದು ಹೊಸ ರೂಪವನ್ನು ಕೊಡಲು. ಸಮಾಜವು ಖಾಸಗಿ ಒಡೆತನವ ರದ್ದುಗೊಳಿಸಿ, ಸಮಾಜವಾದದ ಸಿದ್ಧಾಂತವನ್ನು ಘೋಷಿಸಿ ಉತ್ಪಾದನೆ, ಉತ್ಪಾದನಾ ಉಪಕರಣಗಳು, ಅವುಗಳ ಮೇಲ ಒಡೆತನ ಹಾಗೂ ಅವುಗಳ ವಿತರಣೆಯ ಮೇಲೆ ಸರಕಾರ ನಿಯಂತ್ರಣದ ಅಗತ್ಯವನ್ನು ಸಮಾಜವಾದ ಪ್ರತಿಪಾದಿಸಿತು.

19ನೇ ಶತಮಾನದ ಮಧ್ಯಭಾಗದಲ್ಲಿ ಈ ಸಮಾಜವಾದ ತಂತ್ರ ಜರ್ಮನ್ ತತ್ವಜ್ಞರಾದ ಕಾರ್ಲ್‌ಮಾರ್ಕ್ಸ್ ಮ ಫ್ರೆಡರಿಕ್ ಎಂಜಲ್ಸ್‌ರವರ ಸಮತಾವಾದದಿಂದ ಅವರ ವಿ

ಬದಲಾಗಿ ಒಂದು ಹೊಸ ಆವಿಷ್ಕಾರ ಪಡೆಯಿತು. ಫ್ಯೂಹರ್‌ಬ್ಯಾಕ್‌ನಿಂದ ಪ್ರಭಾವಿತನಾದ ಕಾರ್ಲ್‌ಮಾರ್ಕ್ಸನು ತನ್ನ ಸಮತಾವಾದವನ್ನು ವೈಜ್ಞಾನಿಕವಾದ ಸಮತಾ ಸಮಾಜ ವಾದ ಅಥವಾ 'ಕಮ್ಯೂನಿಸಂ' ಎಂದು ಕರೆದನು.

1849ರಲ್ಲಿ ಕಮ್ಯೂನಿಸಂ ಪ್ರಣಾಳಿಕೆಯನ್ನು ಕಾರ್ಲ್ ಮಾರ್ಕ್ಸ್ ಹೊರಡಿಸಿದ ನಂತರ ಅವರ ಸುಪ್ರಸಿದ್ಧ 'ದಾಸ್ ಕ್ಯಾಪಿಟಲ್' ಎಂಬ ಕೃತಿ ಬೆಳಕಿಗೆ ಬಂತು. ಆರ್ಥಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳ ಮೇಲೆ ಅಧ್ಯಯನ ನಡೆಸಿದ ಆತನು ಸಮಾಜವಾದದಿಂದ ಸಮತಾವಾದಕ್ಕೆ ಉಂಟಾಗುವ ಸ್ಥಿತ್ಯಂತರ ಗಳನ್ನು ಸ್ಪಷ್ಟವಾಗಿ ನಿರೂಪಿಸಿದನು. ಬಂಡವಾಳಶಾಹಿ ಅರ್ಥ ವ್ಯವಸ್ಥೆಯಲ್ಲಿನ ಅಸಮಾನತೆ ಅಪರಾಧ ವರ್ತನೆಗೆ ಕಾರಣ ಎಂದು ಸಾರಿದುದಲ್ಲದೆ "ಮಿಗಿತಾಯ ಮೌಲ್ಯ"ದ ರಹಸ್ಯವನ್ನು ಈ ಗ್ರಂಥದಲ್ಲಿ ಬಯಲಿಗೆಳೆದ.

ಬಂಡವಾಳಶಾಹಿ ಸಮಾಜವು ಶ್ರೀಮಂತಿಕೆಯ ಮೌಲ್ಯ ಗಳನ್ನು ಬದಲಿಸಿ, ಸ್ವೇಚ್ಛೆಯಾಗಿ ಖರ್ಚು ಮಾಡುವುದು, ಭೋಗ ಜೀವನದ ಹಂಬಲ ಮೊದಲಾದುವುಗಳನ್ನು ಹೆಚ್ಚಿಸುತ್ತದೆ. ಇಂತಹ ಸರ್ಕಾರವು ಕೇವಲ ಕೆಲವೇ ಗುಂಪಿನವರ ಹಿಡಿತದಲ್ಲಿದ್ದು, ಸಮಾಜದ ಕೀಳು ಮೇಲು ಭೇದವನ್ನು ಹುಟ್ಟಿಸಿ ಅವರನ್ನು ಶೋಷಿಸಿ ರೊಚ್ಚಿಗೆಬ್ಬಿಸುವುದರಿಂದ ಅಪರಾಧದ ಕಡೆಗೆ ಆಕರ್ಷಿಸು ತ್ತದೆ ಎಂದು ಒತ್ತಾಯಿಸಿದನು.

ಕಮ್ಯೂನಿಸಂ ಅಸ್ತಿತ್ವಕ್ಕೆ ಬಂದರೆ ಮಾನವ, ರಾಷ್ಟ್ರದ ಆರ್ಥಿಕ ಸಂಪತ್ತಿನೊಂದಿಗೆ ಬೆರೆತು, ಸಂಪತ್ತಿನ ಖಾಸಗಿ ಒಡೆತನಕ್ಕೆ ನಷ್ಟ ವುಂಟಾಗುತ್ತದೆ. ಇದರಿಂದ ಸಮಾಜದ ಎಲ್ಲಾ ವರ್ಗದವರಿಗೂ ಸಮಾನವಾದ ಆರ್ಥಿಕ ಲಾಭ ದೊರಕುವುದರಿಂದ; ಜನರಲ್ಲಿ

ಸುಖ, ಶಾಂತಿ ನೆಲೆಸಿ, ಬಡತನ ನಿರ್ಮೂಲವಾಗಿ ಅಪರಾಧಗಳ ಇಲ್ಲದಂತಾಗುತ್ತದೆ ಎಂದು ಕಾರ್ಲ್‌ಮಾರ್ಕ್ಸನು ತನ್ನ ಲೇಖ ದಲ್ಲಿ ವಾದಿಸಿದನು.

೭. ನಗರೀಕರಣ

ಅಪರಾಧ ಶಾಸ್ತ್ರಜ್ಞರಾದ, ಈ. ಎಚ್. ಸದರ್‌ಲ್ಯಾಂಡ್‌ರವ ಅಪರಾಧ ವರ್ತನೆಗೆ ಕಾರಣವಾದ "ಗುಣ ವೈಖರಿ" ಸಾಂಗ ತತ್ವವನ್ನು ಅನೇಕರು ಒಪ್ಪಿದ್ದಾರೆ. ನಗರಗಳಲ್ಲಿನ ಬೃಹದಾಕಾರ ಕೈಗಾರಿಕೋದ್ಯಮಗಳು, ಉತ್ಪಾದನಾ ಸಾಮರ್ಥ್ಯವನ ಹೆಚ್ಚಿಸುವ ವಿಧಾನಗಳು, ಆರ್ಥಿಕ, ಸಾಮಾಜಿಕ, ಸಂಘ ಸಂಸ್ಥೆಗಳ ವಾಣಿಜ್ಯೋದ್ಯಮಗಳು, ಸಾಮಾಜಿಕ ಪರಿಸ್ಥಿತಿಗಳನ್ನು ಬದಲಿ ಪಟ್ಟಣಗಳಲ್ಲಿನ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವುದ ಅಪರಾಧ ವರ್ತನೆಗೆ ಮುಖ್ಯ ಕಾರಣವೆಂದು ಅವರು ತಮ ವಾದದಿಂದ ಸಮರ್ಥಿಸಿದರು.

ಅತಿ ವೇಗದ ಸಾರಿಗೆ ಸಂಪರ್ಕಗಳು, ಗ್ರಾಮಾಂತರಗಳಲ್ಲಿ ಸ್ವಾ ಲಂಬಿಗಳಾಗಿದ್ದ ಹಳ್ಳಿಗರನ್ನು, ಭೂ ಹೀನರನ್ನು, ಉದ್ಯೋ ನ್ವೇಷಣೆಗಾಗಿ ವಲಸೆ ಹೊರಟ ಕೂಲಿಕಾರರ ಗುಂಪನ್ನು, ಪಟ್ಟಣ ಜೀವನ ವೈಖರಿ ಆಕರ್ಷಿಸಿ, ಜನಸಂಖ್ಯೆಯನ್ನು ಹೆಚ್ಚಿಸಿತ ಸಮಾಜದಲ್ಲಿನ ಕೀಳು ಮೇಲೆಂಬ ವರ್ಗ ಭೇದವು, ಮೇಲು ವ ದವರನ್ನು ಪಟ್ಟಣಗಳಲ್ಲಿ ವ್ಯಾಪಕವಾಗಿ ಹರಡಿ, ಸುಸಜ್ಜಿತ ವ ಪ್ರದೇಶಗಳಲ್ಲಿ ವಾಸಿಸುವಂತಾದರೆ, ನಾಗರಿಕ ಸೌಲಭ್ಯಗಳೇ ಇಲ್ಲ ಜೀವನದ ಆವಶ್ಯ ವಸ್ತುಗಳ ಕೊರತೆ, ಮಕ್ಕಳ ಶಿಕ್ಷಣದ ಕೊರ ಅನಾರೋಗ್ಯ ವಾತಾವರಣದಿಂದ ಕೂಡಿದ ಕೊಳಚೆ ಪ್ರದೇಶಗಳ ಕೀಳು ವರ್ಗದ ಜನರು ವಾಸಿಸುವಂತಾದರು. ಹಳ್ಳಿ

ಸಂಪ್ರದಾಯ, ಧಾರ್ಮಿಕ ನಂಬಿಕೆಗಳೊಂದಿಗೆ ಬೆಳೆದು ವಲಸೆ ಬಂದ ಜನರಿಗೆ ಪಟ್ಟಣದ ಸಂಸ್ಕೃತಿಯೊಂದಿಗೆ ಹೊಂದಿಕೊಳ್ಳಲಾರದೆ ಹಸಿವು, ಬಡತನ, ನಿರುದ್ಯೋಗ ಇವೇ ಮೊದಲಾದ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಕೊಳಚೆ ಪ್ರದೇಶಗಳು ಅವರ ವಾಸಸ್ಥಾನಗಳಾದುವು.

ಪಟ್ಟಣಗಳಲ್ಲಿ ಹಾಸುಹೊಕ್ಕಾದ ಹಣದಾಸೆ, ಸ್ವಾರ್ಥಪರತೆ, ಮೋಸ, ವಂಚನೆ, ಹಿಂಸಾಚಾರ, ಲೈಂಗಿಕತೆ, ಇವೇ ಮೊದಲಾದುವುಗಳು ಅವರ ಧಾರ್ಮಿಕ ನಂಬಿಕೆ ಮತ್ತು ಸಾಮಾಜಿಕ ಮೌಲ್ಯಗಳನ್ನು ಕ್ಷಯಿಸುವಂತೆ ಮಾಡಿತು. ಪ್ರಾಮಾಣಿಕ ಜೀವನವನ್ನು ವಿರೋಧಿಸಿ. ಶ್ರೀಮಂತಿಕೆಯು ಜೀವನಕ್ಕೆ ಸೋಪಾನವಾದ ಹೊಸ ಬಗೆಯ ಸಾಮಾಜಿಕ, ಆರ್ಥಿಕ ಅಪರಾಧಗಳಿಗೆ ಕಾರಣವಾದವು. ಉತ್ತಮ ವರ್ಗದವರು ವಾಸಿಸುವ ಪ್ರದೇಶಗಳಲ್ಲಿ ಬಿಳಿ ತೊಡುಗೆ ಅಪರಾಧಗಳು ಹೆಚ್ಚಾದರೆ, ಜನನಿಬಿಡವಾದ ಕೊಳಚೆ ಪ್ರದೇಶಗಳಲ್ಲಿ ಜೂಜುಕಟ್ಟೆ, ವೇಶ್ಯಾವೃತ್ತಿ, ನಿಷಿದ್ಧ ವಸ್ತುಗಳ ಸಾಗಾಣಿಕೆ, ಮಾರಾಟ, ಅಕ್ರಮ ದಾಸ್ತಾನು, ಕಳ್ಳ ಸಾಗಾಣಿಕೆ, ಮಾರಾಟ, ಆಹಾರ ಧಾನ್ಯಗಳ ಮತ್ತು ಅಗತ್ಯ ವಸ್ತುಗಳ ಅಕ್ರಮ ದಾಸ್ತಾನು, ಕಲಬೆರಕೆ ವಸ್ತುಗಳ ಮಾರಾಟ, ಕಾಳಸಂತೆ ಇವೇ ಮೊದಲಾದ ಅಪರಾಧಗಳು ಹೆಚ್ಚಾದುವು.

3. ಸಂಚರಣೆ

ಸಮಾಜದ ಅತಿ ವೇಗದ ಸಂಚರಣೆಯ ಪ್ರಭಾವವು ವಿವಿಧ ಪ್ರಾದೇಶಿಕ ಗುಂಪುಗಳನ್ನು ಹತ್ತಿರ ತಂದಿತು. ಜನ ಸಂಚಾರ ಮತ್ತು ಸರಕು ಸಾರಿಗೆ ಹೆಚ್ಚಾದಂತೆ ಮಾನವನ ಚಟುವಟಿಕೆಗಳ

ಕ್ಷೇತ್ರ ವಿಶಾಲಗೊಂಡಿತು. ಹಿಂದಿನ ಸಾಮೂಹಿಕ ಜೀವನದಲ್ಲಿ ಅವನು ನಂಬಿದ್ದ ವ್ಯಕ್ತಿಯ ವಿಚಾರ ಪ್ರಣಾಳಿಕೆಗಳು ಬದಲಾಗಿ ನೆರೆಹೊರೆಯ ಮಧುರ ಬಾಂಧವ್ಯವನ್ನು ನುಚ್ಚುನೂರಾಗಿ ಮಾಡಿತು. ಪ್ರಾಥಮಿಕ ಸಂಸ್ಕೃತಿಯ ಸಂಪರ್ಕ ಕಳೆದುಕೊಂಡ ವ್ಯಕ್ತಿ ಹೊಸ ಸಮಾಜದ ಸಂಸ್ಕೃತಿಯೊಂದಿಗೆ ಹೊಂದಿಕೊಳ್ಳ ಲಾರದೆ ವಿಶಾಲವಾದ ಪಟ್ಟಣಗಳಲ್ಲಿ ಅನಾಮಿಕನಾಗಿ ಹಸಿವು ಬಡತನ, ನಿರುದ್ಯೋಗಗಳಿಂದ ಕಂಗೆಟ್ಟು ತನ್ನ ಉಳಿವಿಗಾಗಿ ಸುಲಭೋಪಾಯದ ಭಿಕ್ಷಾಟನೆ, ವೇಶ್ಯಾವೃತ್ತಿ, ಕಾಳಸಂತೆ, ಕಳ್ಳ ಸಾಗಾಣಿಕೆ, ನಿಷಿದ್ಧ ವಸ್ತುಗಳ ಮಾರಾಟ, ವಾಹನಗಳ ಕಳವು ಲೈಂಗಿಕ ಮತ್ತು ಹಿಂಸಾಚಾರ, ರಾಜಕೀಯ ಪಕ್ಷಗಳಿಂದ ಪ್ರೇರಿತ ವಾದ ಸಾರ್ವತ್ರಿಕ ಪ್ರತಿಭಟನೆ, ಸಾರ್ವಜನಿಕ ಶಿಸ್ತಿನ ಭಂಗ, ಇವೇ ಮೊದಲಾದ ಅಪರಾಧಗಳ ವರ್ತನೆಗೆ ಪ್ರಚೋದಿಸಿತು.

4. ಸಾಮಾಜಿಕ ಸಂಸ್ಥೆಗಳು

ಮಾನವನ ಸಾಮಾಜಿಕ ಆವಶ್ಯಕತೆಗಳನ್ನು ಈಡೇರಿಸಲು ಕುಟುಂಬ, ಆರ್ಥಿಕ ಸಂಸ್ಥೆಗಳು, ಸರ್ಕಾರ, ಶೈಕ್ಷಣಿಕ ಸಂಸ್ಥೆಗಳು ಮತ್ತು ಧಾರ್ಮಿಕ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ. ಪ್ರತಿಯೊಂದು ಸಂಸ್ಥೆಯೂ ಸಮಾಜದ ಮುಂದುವರಿಕೆಗೆ ಹಾಗೂ ಅದರ ಏಳಿಗೆಗೆ ದುಡಿಯುತ್ತಲೇ ಬಂದಿದೆ. ಈ ಸಂಸ್ಥೆಗಳು ಎಲ್ಲಾ ಸಮಾಜ ಗಳಲ್ಲಿಯೂ ಒಂದೇರೂಪದಲ್ಲಿರದೆ, ವಿವಿಧ ಸಮಾಜದಲ್ಲಿ ವಿವಿಧ ರೀತಿಯ ರೂಪ ತಾಳಿ ಕೆಲಸ ಮಾಡಿದರೂ, ಸಮಾಜದಲ್ಲಿ ಬದಲಾಗಬಹುದಾದಂತಹ ಅನೇಕ ಕಾರಣಗಳಿಂದ, ಅಪರಾಧ ನಿಯಂತ್ರಣ ಕಾರ್ಯದಲ್ಲಿ ಯಶಸ್ವಿಯಾಗಿಲ್ಲ.

5. ಕುಟುಂಬ

ಕುಟುಂಬವು ಮಗುವಿನ ಪ್ರಾಥಮಿಕ ಶಿಕ್ಷಣಸಂಸ್ಥೆ. ಮಗುವು ಹುಟ್ಟಿದಂದಿನಿಂದ ದೊಡ್ಡವನಾಗುವವರೆವಿಗೂ ಕುಟುಂಬ ದೊಂದಿಗೆ ನಿಕಟ ಸಂಬಂಧ ಹೊಂದಿರುತ್ತದೆ. ಸರಳ ಸಮಾಜ ದಲ್ಲಿ ಮಕ್ಕಳನ್ನು ಸಾಕುವುದು ಸುಲಭವಾಗಿತ್ತು. ಆದರೆ ಅನೇಕ ಆರ್ಥಿಕ, ಸಾಮಾಜಿಕ, ರಾಜಕೀಯ ಕಾರಣಗಳಿಂದ ಸಂಕೀರ್ಣ ಹೊಂದಿದ ಸಮಾಜದಲ್ಲಿ ಮಕ್ಕಳನ್ನು ಬೆಳೆಸುವುದು ಅಷ್ಟು ಸುಲಭ ವಲ್ಲ. ಸಾಮಾನ್ಯವಾಗಿ ಈ ಕೆಳಕಂಡ ಕಾರಣಗಳು ಮಕ್ಕಳನ್ನು ಅಪರಾಧ ವರ್ತನೆಯ ಕಡೆಗೆ ನಡೆಸುತ್ತದೆ.

(ಅ) ಕುಟುಂಬದ ಸದಸ್ಯರುಗಳು ಅನೈತಿಕ ವ್ಯಾಪಾರದಲ್ಲಿ ಜೀವಿಸುವುದು ಅಂದರೆ, ವೇಶ್ಯಾವೃತ್ತಿ, ತಾತ್ಕಾಲಿಕ ಸುಖ ಕೊಡುವ ಮಾದಕ ವಸ್ತು ಸೇವನೆ ಅಥವಾ ಕುಡುಕರಾಗಿರುವುದು ಅಥವಾ ಅಪರಾಧ ವೃತ್ತಿಯಲ್ಲಿ ಜೀವಿಸುವುದು.

(ಆ) ತಂದೆ-ತಾಯಿಗಳ ಅಕಾಲ ಮರಣದಿಂದ, ವಿವಾಹ ವಿಚ್ಛೇದನ ಅಥವಾ ಪರಿತ್ಯಾಗದಿಂದ ಒಡೆದ ಕುಟುಂಬವೆನಿಸಿ ಕೊಳ್ಳುವುದು.

(ಇ) ತಂದೆ-ತಾಯಿಗಳು ಅನಾದರಣೆಯಿಂದ, ಅಜ್ಞಾನ ದಿಂದ, ಖಾಯಿಲೆಯಿಂದ ಮಕ್ಕಳನ್ನು ಸರಿಯಾಗಿ ಪೋಷಿಸದೇ ಇರುವುದು.

(ಈ) ಕುಟುಂಬದಲ್ಲಿನ ತಂದೆ-ತಾಯಿಗಳ ಮಧ್ಯೆ ಪರಸ್ಪರ ಪ್ರೀತಿ ಇಲ್ಲದೆ ಮಕ್ಕಳನ್ನು ಅಶಿಸ್ತಿನಲ್ಲಿ ಬೆಳೆಸುವುದು; ಇಲ್ಲವೇ ಕ್ರೂರವಾದ ಶಿಕ್ಷೆ ವಿಧಿಸುವುದು ಅಥವಾ ಸಲಿಗೆಯಿಂದ ಬೆಳೆಸುವುದು.

(ಉ) ವಿವಿಧ ಸಂಸ್ಕೃತಿಯ ಹಿನ್ನೆಲೆಯಿಂದ ಬಂದ ತಂದ ತಾಯಿಗಳು, ಭಿನ್ನ ಜಾತಿಯವರಾಗಿದ್ದರೆ ಅಥವಾ ವ್ಯತ್ಯಾಸ ಹೊಂದಿದ ಸ್ಥಾನಮಾನಗಳುಳ್ಳವರಾಗಿದ್ದರೆ.

(ಊ) ಕುಟುಂಬದಲ್ಲಿನ ಬಡತನ, ನಿರುದ್ಯೋಗ, ಸಾಕಷ್ಟ ವರಮಾನ ಇಲ್ಲದಿರುವುದು, ಗಂಡ ಹೆಂಡತಿಯರಿಬ್ಬರೂ ಮಕ್ಕಳನ ತೊರೆದು ದೂರದ ಉದ್ಯೋಗದಲ್ಲಿ ಕೆಲಸ ಮಾಡುವುದು.

6. ಶಿಕ್ಷಣ ಸಂಸ್ಥೆ

ಕುಟುಂಬದ ಮಕ್ಕಳಿಗೆ ಸಕಾಲದಲ್ಲಿ ಶಿಕ್ಷಣ ನೀಡದಿದ್ದರೆ ಅಂತಹ ಮಕ್ಕಳು ಬಹುಬೇಗ ಅಪರಾಧ ವರ್ತನೆಯ ಕಡೆ ಆಕರ್ಷಿತರಾಗುತ್ತಾರೆ. ಶಿಕ್ಷಣ ಸಂಸ್ಥೆಗಳಲ್ಲಿನ ಆಧುನಿಕ ವಿದ ಪದ್ಧತಿ ಬದಲಾಗುತ್ತಿದ್ದು, ಮಕ್ಕಳ ಸಂಖ್ಯೆ ಹೆಚ್ಚಾಗಿ, ಗುರ ಶಿಷ್ಯರ ಸಂಪರ್ಕ ಕಡಿಮೆಯಾಗಿ ಮಾರ್ಗದರ್ಶನವಿಲ್ಲದ ಯುವ ಪೀಳಿಗೆಯು, ಜೀವನದಲ್ಲಿ ಹತಾಶರಾಗಿ ಅಪರಾಧ ವೃತ್ತಿಗೆ ಕಾರ ವಾದವು. ಅಡಿಗೆ ಮನೆ, ಬಚ್ಚಲು, ಶೌಚಗೃಹ ಮೊದಲಾ ಮೂಲ ಸೌಲಭ್ಯಗಳೇ ಇಲ್ಲದ ಕೊಳಚೆ ಪ್ರದೇಶಗಳು ಜಾಸ್ತಿಯಾ ಇಂತಹ ಪ್ರದೇಶಗಳಲ್ಲಿ ಹುಟ್ಟಿ ಬೆಳೆಯುವ ಮಕ್ಕಳಿಗೆ ಒಳ್ಳೆಯ ಶಾಲೆಗಳಿಲ್ಲದೆ, ಆಟದ ಬಯಲುಗಳಿರದೆ, ಬೀದಿಗಳೇ ಅವ ಮನರಂಜನೆಯ ರಂಗವಾಗುತ್ತದೆ. ಮದ್ಯಪಾನ, ವೇಶ್ಯಾವಾಟಿ ಜೂಜುಕಟ್ಟೆ, ಕಾಳಸಂತೆ, ಮೋಸ, ವಂಚನೆ, ಇವೇ ಮೊದಲಾ ಚೋರ ಸಂಸ್ಕೃತಿಯ ಗುಂಪನ್ನು ಸಂಪರ್ಕಿಸುವ ಎಳೆವಯಸ್ಸಿ ಮಕ್ಕಳಮೇಲೆ, ಇಂತಹ ಪ್ರತ್ಯಾವರಣ ತನ್ನ ದುಷ್ಪರಿಣಾಮ ವನ್ನು ಬೀರುವುದರಿಂದ, ಅಪರಾಧ ವೃತ್ತಿಯ ಸೆಳೆತಕ್ಕೆ ಸಿಕ್ಕು ಮಕ್ಕಳು ಬಾಲಾಪರಾಧಿಗಳಾಗುತ್ತಾರೆ.

7. ಶಿಕ್ಷಣ ಮಾಧ್ಯಮಗಳು

1892ರಲ್ಲಿ ಇಟಲಿ ದೇಶದ ಎನ್ರಿಕೊ ಫೆರಿ ಎಂಬ ಅಪರಾಧ ಶಾಸ್ತ್ರಜ್ಞನು, ಸಮೂಹ ಮಾಧ್ಯಮಗಳೆನಿಸಿದ, ಜನಪ್ರಿಯ ಸಾಹಿತ್ಯ, ವೃತ್ತಪತ್ರಿಕೆ ಮತ್ತು ಸಚಿತ್ರವಾರ ಪತ್ರಿಕೆಗಳು ಪ್ರಚುರಪಡಿಸುವ ಅಹಿತಕರವಾದ ವಿಷಯಗಳು ಅಪರಾಧಗಳ ಹೆಚ್ಚಳಕ್ಕೆ ಕಾರಣ ವಾಗಿದೆ ಎಂದು ವ್ಯಾಖ್ಯಾನಿಸಿದ. ಒಂದು ಶತಕದ ನಂತರ ಅಮೆರಿಕಾದವರೂ ಸಹ ಸಮುದಾಯದ ಮಾಧ್ಯಮಗಳಲ್ಲಿ ಒಂದಾದ ದೂರದರ್ಶನ ಅಪರಾಧ ವರ್ತನೆಗೆ ಭಾಗಶಃ ಕಾರಣ ವಾಗಿದೆ ಎಂದು ಆರೋಪಿಸಿದ್ದಾರೆ.

ರೇಡಿಯೊ, ಚಲನಚಿತ್ರಗಳು, ದೂರದರ್ಶನ, ವೃತ್ತಪತ್ರಿಕೆ, ವಾರ ಮತ್ತು ಮಾಸ ಪತ್ರಿಕೆಗಳು, ಅವರು ಪ್ರಸಾರ ಮಾಡುವ ಲೈಂಗಿಕ ಮತ್ತು ಹಿಂಸಾಚಾರದ ವಿವರಗಳ ದೃಶ್ಯಗಳು, ಪ್ರೇಕ್ಷಕರ ಹಾಗೂ ಓದುಗರಮೇಲೆ ಗಮನೀಯವಾದ ದುಷ್ಪರಿಣಾಮ ಗಳನ್ನು ಬೀರಿದರೂ, ಅದನ್ನು ಬಿತ್ತರಿಸುವ ಉದ್ದೇಶ ಸದ್ಭಾವನೆ ಯಿಂದ ಕೂಡಿದ್ದುದು. ಆದರೂ ಮಕ್ಕಳು, ಹದಿವಯಸ್ಸಿನ ಯುವಕ ಯುವತಿಯರು, ಚಂಚಲಚಿತ್ತರು. ಅವರಲ್ಲಿನ ಅಪರಾಧ ವರ್ತನೆಯ ಕಡೆಗಿನ ಅನುಸಿದ್ಧತೆ, ಅವರ ಭಾವೋದ್ವೇಗಗಳನ್ನು ಕೆರಳಿಸುವುದರಿಂದ ಅಪರಾಧಕ್ಕೆ ಕಾರಣ ಎಂದು ಸಂಶೋಧನೆ ಮತ್ತು ಅಧ್ಯಯನಗಳಿಂದ ದೃಢಪಟ್ಟಿದೆ.

8. ಮದ್ಯಪಾನ ಮತ್ತು ಮಾದಕ ವಸ್ತುಗಳ ಬಳಕೆ

ಮದ್ಯಪಾನ ಮತ್ತು ಮಾದಕ ವಸ್ತುಗಳ ಬಳಕೆ ಅಪರಾಧ ಕಾನೂನನ್ನು ವಿರೋಧಿಸುವುದರಿಂದ, ಅದು ಅಪರಾಧವೆನಿಸಿ ಕೊಂಡಿದೆ. ಪಶ್ಚಿಮ ರಾಷ್ಟ್ರಗಳಲ್ಲಿ ಇತರೇ ಅಪರಾಧಗಳಿಗಿಂತ

ಮದ್ಯಪಾನ ಮತ್ತು ನಿಷಿದ್ಧ ವಸ್ತುಗಳ ಬಳಕೆ ಹಾಗೂ ಅದರ ಮಾರಾಟ ಆ ರಾಷ್ಟ್ರಗಳ ಸರ್ಕಾರಕ್ಕೆ ದೊಡ್ಡ ಸಮಸ್ಯೆಯನ್ನೊಡ್ಡಿದೆ. ಕಾರಣ ಅನೇಕ ಯುವ ಪೀಳಿಗೆಯುವರು ಅದರ ಸೇವನೆಯಿಂದ ಆಕರ್ಷಿತರಾಗಿ, ಅವರ ಜೀವನವನ್ನೇ ಹಾಳು ಮಾಡಿಕೊಳ್ಳು ತ್ತಿದ್ದಾರೆ. ಈ ವಸ್ತುಗಳ ದಾಸ್ಯಕ್ಕೊಳಗಾದವರು ಕಳವು, ವೇಶ್ಯಾ ವೃತ್ತಿ, ತಲೆಹಿಡುಕತನ, ಲೈಂಗಿಕ ಮತ್ತು ಹಿಂಸಾಚಾರದ ಅಪರಾಧ ಗಳಲ್ಲಿ ತೊಡಗುತ್ತಾರೆ.

೫. ತಿದ್ದುಪಡಿ ಆಡಳಿತ

'ಅಪರಾಧ'ದ ಮೇಲೆ ಅಧ್ಯಯನ ನಡೆಸಿದ ಸಮಾಜ ಶಾಸ್ತ್ರಜ್ಞ, ಮನೋವಿಜ್ಞಾನ ತಜ್ಞ, ಮನೋಚಿಕಿತ್ಸಾ ವೈದ್ಯರುಗಳು ಮತ್ತು ಇನ್ನು ಇತರೇ ತಜ್ಞರುಗಳು, ವಿಜ್ಞಾನದ ವಿಶಾಲ ತತ್ವ ಗಳನ್ನಾಧರಿಸಿ ನಡೆಸಿದ ಪ್ರಯೋಗ ಸಮೀಕ್ಷೆಗಳ ಬಳಕೆಯಿಂದ, ಅಪರಾಧ ವರ್ತನೆಯ ಕಾರಣಗಳನ್ನು ಪತ್ತೆಹಚ್ಚಿ, ವ್ಯಕ್ತಿಯ ಚಾರಿತ್ರ್ಯವನ್ನು ಶಿಕ್ಷಾಸಂಧಾರಣಾ ತಂತ್ರಗಳಿಂದ ತಿದ್ದುಪಡಿಸಿ, ಪುನರ್‌ವ್ಯವಸ್ಥಿತಗೊಳಿಸಲು ಅಪರಾಧ ಶಾಸ್ತ್ರವನ್ನು ಬಳಸಿದರು.

ವಿಶ್ವವಿದ್ಯಾನಿಲಯಗಳಲ್ಲಿ ಸಮಾಜಶಾಸ್ತ್ರ, ಮನೋ ವಿಜ್ಞಾನ, ಮನೋ ವೈದ್ಯಕೀಯ ಚಿಕಿತ್ಸೆ ಮತ್ತು ಅದಕ್ಕೆ ಸಂಬಂಧ ಪಟ್ಟ ವ್ಯಕ್ತಿನಿರತ ಅಪರಾಧ ತಜ್ಞರುಗಳು ಬಹುತೇಕ ವಿಶ್ವವಿದ್ಯಾನಿಲಯಗಳಲ್ಲಿ ಅಪರಾಧ ಶಾಸ್ತ್ರದ ವಿಷಯವನ್ನು ವಿದ್ಯಾರ್ಥಿ ವೃಂದದವರಿಗೆ ಬೋಧಿಸುತ್ತಿದ್ದವರು ಮತ್ತು ತತ್ಸಂಬಂಧವಾದ ವಿಷಯಗಳಮೇಲೆ ಸಂಶೋಧನೆ ನಡೆಸುತ್ತಿದ್ದ ವರು. ಅವರಲ್ಲಿ ಅನೇಕರು ಸ್ನಾತಕೋತ್ತರ ಅಥವಾ ಡಾಕ್ಟರೇಟ್ ಪದವಿ ಪಡೆದವರು. ಅವರು ಅಪರಾಧ ಪ್ರಕರಣಗಳ ಅಂಕಿ–ಅಂಶ

ಗಳನ್ನು ಸಂಗ್ರಹಿಸಿ, ಅಪರಾಧ ವರ್ತನೆಯ ಅದೇ ವಯಸ್ಸಿನ ಸಭ್ಯರೊಂದಿಗೆ ಹೋಲಿಸಿ, ಅದರಮೇಲೆ ದೀರ್ಘ ಅಧ್ಯಯನ ನಡೆಸಿದರು. ಅಪರಾಧ ವರ್ತನೆಯ ಕಾರಣಗಳನ್ನು ಪತ್ತೆ ಹಚ್ಚಲು ಅವರು ಅನುಸರಿಸಿದ ಕ್ರಮಗಳಲ್ಲಿ, ಮೂರು ರೀತಿಯ ಕ್ರಮಗಳನ್ನು ಮಾತ್ರ ಈ ಕೆಳಗೆ ವಿವರಿಸಲಾಗಿದೆ.

1. ಸಾಮಾನ್ಯ ಜ್ಞಾನವಿಧಾನ

ಅಪರಾಧ ನಾಗರಿಕ ಸಮಾಜದ ಪ್ರತೀಕ ಅಥವಾ ಫಲಿತಾಂಶ ಎಂದಿದ್ದರೂ, ಅದು ಸಮಾಜದ ಸಂಸ್ಕೃತಿಯಷ್ಟೇ ಹಳೆಯದು. ಅದು ಸಮಾಜದಮೇಲೆ ತನ್ನ ಪ್ರಭುತ್ವವನ್ನು ಒಂದಲ್ಲ ಒಂದು ರೀತಿಯಲ್ಲಿ ಹೇರಿ, ತನ್ನ ಕಟುತನದ ಒಡೆತನವನ್ನು ನಡೆಸುತ್ತಲೇ ಬಂದಿದೆ. ಅದನ್ನು ಹತ್ತಿಕ್ಕಲು ಪ್ರಾಚೀನಕಾಲದಿಂದಲೂ ನಡೆಸಿದ ಅನೇಕ ಪ್ರಯತ್ನಗಳು ವಿಫಲಗೊಂಡಿಲ್ಲವಾದರೂ, ಸಮಾಜವನ್ನು ಮಾತ್ರ ಅಪರಾಧದಿಂದ ಮುಕ್ತಗೊಳಿಸಲು ಸಾಧ್ಯವಾಗಿಲ್ಲ. ಅಪರಾಧ ಮತ್ತು ಅಪರಾಧ ವರ್ತನೆಯ ಕಾರಣಗಳನ್ನು ಕಂಡು ಹಿಡಿಯಲು ಅನೇಕ ಕ್ರಮಗಳನ್ನು ಅನುಸರಿಸಲಾಗಿದೆ, ಅವುಗಳಲ್ಲಿ ಸಾಮಾನ್ಯಜ್ಞಾನ ವಿಧಾನ ಒಂದು. ಈ ಕ್ರಮದ ಪ್ರಕಾರ, ಚರಿತ್ರಕಾರರು ಮತ್ತು ಸಮಾಜ ವಿಜ್ಞಾನಿಗಳು ಅಪರಾಧ ಕೃತ್ಯದ ಬಗ್ಗೆ ಅನುಭವದ ಮೂಲಕ ಹಾಗೂ ಜನಸಾಮಾನ್ಯರ ಅಭಿಪ್ರಾಯ ಗಳ ಮಾಹಿತಿಯನ್ನು ಸಂಗ್ರಹಿಸಿ ವ್ಯಕ್ತಿ ಅಪರಾಧಿಯಾಗಲು ಕಾರಣ ಗಳೇನು ಮತ್ತು ಹೇಗೆ ಎಂಬುದರ ಬಗ್ಗೆ ಅಧ್ಯಯನ ನಡೆಸುವುದು. ಇದು ವೈಜ್ಞಾನಿಕ ವಿಧಾನವಲ್ಲದುದೇ ಈ ಕ್ರಮದ ನ್ಯೂನತೆ.

2. ಅಂಕಿ-ಅಂಶಗಳ ಸಂಗ್ರಹಣೆ ವಿಧಾನ

ಈ ವಿಧಾನದಂತೆ ಸೆರೆಮನೆಗಳಲ್ಲಿನ ಬಂಧಿಗಳ, ಜನಾಂಗ.

ಬುಡಕಟ್ಟು, ಲಿಂಗ, ವಯಸ್ಸು, ಕುಟುಂಬ ಚರಿತ್ರೆ, ಆರ್ಥಿಕ ಹಿನ್ನೆಲೆ, ಶಿಕ್ಷಣ, ಉದ್ಯೋಗಚರಿತ್ರೆ, ದೈಹಿಕ ಮತ್ತು ಮಾನಸಿಕ ಲಕ್ಷಣ ಇವೇ ಮೊದಲಾದುವುಗಳ ಅಂಕಿ–ಅಂಶಗಳನ್ನು ಸಂಗ್ರಹಿಸಿ, ಅವರ ದೈಹಿಕ, ಮಾನಸಿಕ ರಚನೆಗೂ ಮತ್ತು ಸಾಮಾಜಿಕ ಕಾರಣಗಳಿಗೂ ಇರುವ ಕಾರ್ಯಕಾರಕ ಸಂಬಂಧವನ್ನು ಪತ್ತೆಹಚ್ಚುವುದು. ಹೀಗೆ ಮಾಡುವಾಗ ಅಪರಾಧ ವರ್ತನೆಯ ಯುವಕ–ಯುವತಿಯರನ್ನು ಅದೇ ವಯಸ್ಸಿನ ಶಾಲಾ ಯುವಕ–ಯುವತಿಯರ ಗುಂಪಿನೊಂದಿಗೆ ಅಥವಾ ಅಪರಾಧ ವರ್ತನೆಯ ವಯಸ್ಕರನ್ನು ಅದೇ ವಯಸ್ಸಿನ ಸಭ್ಯರ ವರ್ತನೆಯೊಂದಿಗೆ ಹೋಲಿಸಿ ಅಧ್ಯಯನ ನಡೆಸುವುದು. ಅವರೊಳಗಣ ಯಾವ ಸ್ಥಿತ್ಯಂತರಗಳು ಅಪರಾಧ ವರ್ತನೆಗೆ ಕಾರಣಗಳಾಗಿವೆ ಎಂಬುದನ್ನು ಪತ್ತೆ ಹಚ್ಚುವುದು.

3. ವ್ಯಕ್ತಿಯ ಇತಿಹಾಸವನ್ನು ಅಧ್ಯಯನ ಮಾಡುವ ವಿಧಾನ

ಈ ಕ್ರಮದ ಪ್ರಕಾರ ವ್ಯಕ್ತಿಯ ಕುಟುಂಬದ ಹಿನ್ನೆಲೆ, ಹುಟ್ಟಿ ಬೆಳೆದ ಪರಿಸರ, ಶಿಕ್ಷಣ, ಅದರ ಕಡೆಗಿನ ಅವನ ನೋಟ, ತಳೆದ ನಿಲುವು, ಯೌವನಕ್ಕೆ ಕಾಲಿಟ್ಟಾಗ ಅವನು ತನ್ನಲ್ಲಿ ಕಂಡುಕೊಳ್ಳುವ ಬಲಹೀನತೆಯ ಕೊರತೆ, ಎದುರಿಸಬೇಕಾದ ಸಮಸ್ಯೆಗಳು, ಅವನು ಸಂಪರ್ಕಿಸಿದ ಜನರ ಸಂಸ್ಕೃತಿ, ಕಲಿತ ಅಭ್ಯಾಸಗಳು, ಅವುಗಳ ಅತಿರೇಕ, ಅವನು ಪ್ರತ್ಯಾವರಣಕ್ಕೆ ಸೂಚಿಸುವ ಪ್ರತಿಕ್ರಿಯೆಗಳು ಮತ್ತು ಅವು ಎಷ್ಟರಮಟ್ಟಿಗೆ ಅಪರಾಧ ವರ್ತನೆಗೆ ಕಾರಣವಾದುವು ಎಂಬುದರಮೇಲೆ ಅಧ್ಯಯನ ನಡೆಸಿ, ಹಿಂದೆ ಶಿಕ್ಷೆ ಹೊತ್ತು ಸೆರೆಮನೆ ಸೇರಿದ್ದರೆ, ಯಾವ ಕಾರಣಕ್ಕೆ, ಅವನು ಅನುಭವಿಸಿದ ಶಿಕ್ಷೆ, ಅದಕ್ಕೆ ಅವನು ಸೂಚಿಸಿದ ಪ್ರತಿಕ್ರಿಯೆಗಳನ್ನು

ಪತ್ತೆ ಹಚ್ಚಿ ಅವನಿಗೆ ಅನುಸರಿಸಬಹುದಾದ ಸುಧಾರಣಾ ಶಿಕ್ಷಣ ಕ್ರಮಗಳನ್ನು ಗೊತ್ತುಪಡಿಸುವುದು.

4. ಪುನರ್ವಸತಿ ತಂತ್ರಗಳು

ಶಿಕ್ಷೆ ನೀಡುವುದರಲ್ಲಿ ಅಪರಾಧಿಗೆ ನೋವು. ದುಃಖ, ಅನಿವಾರ್ಯವಾದರೂ, ಅವನ ಅಪರಾಧ ವರ್ತನೆಯ ಕಾರಣ ಗಳನ್ನು ಪತ್ತೆ ಹಚ್ಚಲು ಅನೇಕ ತಜ್ಞರು ಹಾಗೂ ಅಪರಾಧ ನ್ಯಾಯ ವಿತರಣೆಯಲ್ಲಿ ಸಮಾಜ ನೀತಿಯನ್ನು ರೂಪಿಸಲು ಶ್ರಮಿಸುವ ನ್ಯಾಯವಾದಿಗಳು, ನ್ಯಾಯಾಧೀಶರುಗಳು, ಸಮಾಜ ವನ್ನು ಅಪರಾಧಗಳಿಂದ ರಕ್ಷಿಸಲು ಹಾಗೂ ಅವನನ್ನು ಒಬ್ಬ ಸತ್ಪ್ರಜೆಯನ್ನಾಗಿ ಮಾಡಲು ಸುಧಾರಣಾ ಚಿಕಿತ್ಸೆಯನ್ನು ನೀಡ ಬೇಕೆಂದು ಸಾರಿದರು.

ಸಾಮಾನ್ಯವಾಗಿ ರೋಗಿಯ ಮೇಲ್ವಿಚಾರಣೆ ಹೊಂದಿದ ವೈದ್ಯರು, ರೋಗಿಯನ್ನು ಕುಟುಂಬದ ಸದಸ್ಯರಿಂದ ಬೇರ್ಪಡಿಸಿ, ರೋಗದ ಕಾರಣವನ್ನು ಪತ್ತೆ ಹಚ್ಚಿ ಔಷಧೋಪಚಾರಗಳಿಂದ ಗುಣಪಡಿಸುತ್ತಾರೆ. ರೋಗ ವ್ಯಕ್ತಿಗೆ ಮಾತ್ರ ಸಂಬಂಧಿಸಿದುದು. ರೋಗಿ ತನ್ನ ಆರೋಗ್ಯದ ವಿಚಾರವಾಗಿ ಹೆಚ್ಚಿನ ಎಚ್ಚರಿಕೆ ವಹಿಸುತ್ತಾನಾದುದರಿಂದ, ರೋಗವನ್ನು ಜಾಗ್ರತೆ ಗುಣಪಡಿಸಿ ಕೊಳ್ಳುತ್ತಾನೆ. ಅಪರಾಧ ವರ್ತನೆಯು ಸಮಾಜದ ರೀತಿ, ನೀತಿಯ ಫಲವಾದುದರಿಂದ ರೋಗಿಯನ್ನು ಗುಣಪಡಿಸು ವಷ್ಟು ಸುಲಭವಾಗಿ, ಅಪರಾಧ ವರ್ತನೆಯ ವ್ಯಕ್ತಿಯನ್ನು ಸುಧಾರಣೆ ಮಾಡುವುದು ಸುಲಭವಲ್ಲ.

'ಅಪರಾಧಕ್ಕೆ' ತಕ್ಕ ಶಿಕ್ಷೆಗೆ ಬದಲಾಗಿ 'ಅಪರಾಧಿ'ಗೆ ತಕ್ಕ ಶಿಕ್ಷೆ ಎಂಬುದು ಅನೇಕ ತಜ್ಞರ ವಾದ. ಅಪರಾಧ ಕುಟುಂಬದ ಚರಿತ್ರೆ, ಅವನ ಹಿನ್ನೆಲೆ, ಹುಟ್ಟಿ ಬೆಳೆದ ಪರಿಸರ, ಅಪರಾಧ ನಡೆದ

ಸನ್ನಿವೇಶ, ವ್ಯಕ್ತಿಯ ಮಾನಸಿಕ ದೋಷ, ಇವೇ ಮೊದಲಾದಂಥ
ಗಳನ್ನು ಗಣನೆಗೆ ತೆಗೆದುಕೊಂಡು ಅವುಗಳಲ್ಲಿ ಯಾವ ಕಾರಣ
ಅಪರಾಧ ವರ್ತನೆಗೆ ಸಹಕರಿಸಿತು ಎಂಬುದನ್ನು ಕಂಡುಹಿಡಿಯು
ವುದು. ಸೇಡಿನಿಂದ ಕೂಡಿದ ಶಿಕ್ಷೆಗೆ ಬದಲಾಗಿ, ಶಿಕ್ಷಣದಿಂದ
ಕೂಡಿದ ಶಿಕ್ಷೆಯನ್ನು ವಿಧಿಸುವುದು. ರೋಗಿಯನ್ನು ಕುಟುಂಬ
ದಿಂದ ಬೇರ್ಪಡಿಸುವಂತೆ, ಅಪರಾಧಿಯನ್ನು ಸಮಾಜದಿಂದ ಕೆ
ಕಾಲದವರೆವಿಗೂ ಬೇರ್ಪಡಿಸುವುದು. ನಂತರ ಸುಧಾರಣಾ
ಶಿಕ್ಷೆಯನ್ನು ನೀಡುವುದು.

ಅಪರಾಧ ನ್ಯಾಯ ವಿತರಣೆಯಲ್ಲಿ ಅಪರಾಧಿಯ ಮೇಲ್ವಿ
ಚಾರಣೆಯ ಹೊಣೆಗಾರಿಕೆಯನ್ನು ಎರಡು ಅಂಗಗಳಿಗೆ ವಹಿಸಿರು
ತ್ತದೆ. ಒಂದು ನ್ಯಾಯಾಲಯ, ಎರಡನೆಯದು ಸೆರೆಮನೆ ಮತ್ತು
ಪರಿವೀಕ್ಷಣೆ ಸಂಸ್ಥೆಗಳು. ಈ ಸಂಸ್ಥೆಗಳು ಸ್ವತಂತ್ರವಾದ ಆಡಳಿತದ
ಅಧಿಕಾರ ಹೊಂದಿದ್ದು, ನ್ಯಾಯಾಲಯಗಳೊಂದಿಗೆ ಸಹಕರಿಸಿ
ಅದರ ಆದೇಶಗಳಿಗೆ ಬದ್ಧವಾಗಿ ಕೆಲಸ ಮಾಡುತ್ತವೆ.

ಈ ಸಂಸ್ಥೆಗಳು 'ಅಪರಾಧಿ'ಯನ್ನು ಗುರುತಿಸಿ, ಅಪರಾಧ
ವರ್ತನೆಯ ಕಾರಣಗಳನ್ನು ಪತ್ತೆ ಹಚ್ಚಿ ಅವನನ್ನು ಸುಶಿಕ್ಷಿತನನ್ನಾಗಿ
ಮಾಡಿ, ಸಮುದಾಯದೊಂದಿಗೆ ಬೆರೆತು, ಸಭ್ಯ ಜೀವನ ನಡೆಸಲು
ಅನುವು ಮಾಡಿಕೊಡುವುದಕ್ಕೆ ಅನೇಕ ಸುಧಾರಣಾ ಕ್ರಮಗಳನ್ನು
ರೂಪಿಸಿಕೊಂಡು ಶಿಕ್ಷಣವನ್ನು ನೀಡುವುದು.

೬. ಸೆರೆಮನೆ ಮತ್ತು ಶಿಕ್ಷಣ ಸಂಸ್ಥೆಗಳು

1. ಸೆರೆಮನೆ

18ನೇ ಶತಮಾನದಿಂದೀಚೆಗೆ ಬೆಳೆದ ಸೆರೆಮನೆಯ ಚರಿತ್ರೆಯ
ಪ್ರಕಾರ ಹಿಂದೆ ಅಪರಾಧಿಗಳನ್ನು ಅನಿರ್ದಿಷ್ಟ ಕಾಲ ಬಂಧ

ದಲ್ಲಿಡುತ್ತಿದ್ದರು. ಸೆರೆಮನೆಯ ವಾಸವೇ ಶಿಕ್ಷೆ ಎಂಬುದು ಆ ಕಾಲದ ನಂಬಿಕೆಯಾಗಿತ್ತು. ಆ ಕಾಲದ ಸೆರೆಮನೆಗಳಲ್ಲಿ ಸಾಕಷ್ಟು ಗಾಳಿ, ಬೆಳಕು, ಆವರಣದ ಸ್ವಚ್ಛತೆ ಇಲ್ಲದೆ ಮಾನವನಿಗೆ ಬೇಕಾದ ಮೂಲ ಸೌಲಭ್ಯಗಳು ಇರಲಿಲ್ಲ. ಅಂತಹ ಆವರಣದೊಳಗೆ ಅನೇಕ ಅನೀತಿ ವ್ಯಾಪಾರ, ಸ್ವೇಚ್ಛಾ ಲೈಂಗಿಕತೆಯ ಚಟುವಟಿಕೆಗಳೂ ನಡೆಯುತ್ತಿದ್ದವು. ಕಾಲಕ್ರಮದಲ್ಲಿ ಸೆರೆಮನೆಯ ಆಡಳಿತ ಸುಧಾರಣೆ ಹೊಂದಿ, ಬಂಧಿಗಳ ಔದ್ಯೋಗಿಕ ಶಿಕ್ಷಣಕ್ಕಾಗಿ ಸೆರೆ ಕೊಠಡಿಯ ಮತ್ತು ಆವರಣದ ಸ್ವಚ್ಛತೆ, ಉತ್ತಮವಾದ ಆಹಾರ, ನೈರ್ಮಲ್ಯದ ಗಾಳಿ, ಬೆಳಕು ಮೊದಲಾದ ಸೌಲಭ್ಯಗಳನ್ನು ಒದಗಿಸ ಲಾಯಿತು. ಬಂಧಿಗಳಿಗೆ ಮರಗೆಲಸ, ನೆಯ್ಗೆ ಕೆಲಸ, ಕಬ್ಬಿಣದ ಕೆಲಸ, ಚಾಪೆ ನೇಯುವುದು, ಹೊಲಿಗೆ ಕೆಲಸ ಮುಂತಾದ ಔದ್ಯೋಗಿಕ ಶಿಕ್ಷಣ ಕೊಡಲಾಯಿತು. ಓದಲಿಕ್ಕೆ ಗ್ರಂಥಾಲಯ ಗಳು, ವಿವಿಧ ಆಟಪಾಟಗಳು, ಮನರಂಜನೆಯ ಕಾರ್ಯಗಳನ್ನು ಏರ್ಪಡಿಸಿದರು. ಬಂಧಿಯು ಬಹುಕಾಲ ಸಮಾಜದಿಂದ ಪ್ರತ್ಯೇಕಿ ಸಲ್ಪಡುವುದರಿಂದ, ಬಂಧ ವಿಮುಕ್ತನಾದಮೇಲೆ, ಪುನಃ ಸಮಾಜ ದೊಂದಿಗೆ ಬೆರೆಯಲು ಅನೇಕ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮ ಗಳನ್ನು ಏರ್ಪಡಿಸುವುದು.

2. ಬಯಲು ಸೆರೆಮನೆ

ಬಯಲು ಸೆರೆಮನೆಯಲ್ಲಿನ ಸುಧಾರಣಾ ತಂತ್ರ ಒಂದು ಶತಮಾನಕ್ಕೂ ಹಳೆಯ ಪದ್ಧತಿಯಾದರೂ, ಮೊದಮೊದಲು ಅಪರಾಧಿಗಳನ್ನು ಕೀಳು ದೃಷ್ಟಿಯಿಂದ ಕಾಣುತ್ತಿದ್ದರು. ಆದರೆ ಭಾರತಕ್ಕೆ ಸ್ವಾತಂತ್ರ್ಯ ದೊರಕಿದಮೇಲೆ ಅನೇಕ ರಾಜ್ಯಗಳು ಬಯಲು ಸೆರೆಮನೆಯ ಕ್ರಮವನ್ನು ಜಾರಿಗೆ ತಂದವು. ಈ ಕ್ರಮ

ದಲ್ಲಿ ವ್ಯಕ್ತಿಗೆ ಯಾವುದೇ ದೈಹಿಕ ಅಡೆತಡೆಗಳಿಲ್ಲದೆ ಕನಿಷ್ಟ ಮಿತಿಯ ಮೇಲ್ವಿಚಾರಣೆಯಿಂದ ವಿಸ್ತಾರವಾದ ಬಯಲು ಪ್ರದೇಶದಲ್ಲಿ ವ್ಯವಸಾಯ, ಪಶುಸಂಗೋಪನೆ, ಕೋಳಿ ಸಾಕಾಣಿಕೆ, ಹಾಲು ಉತ್ಪಾದನೆ, ಹಣ್ಣು ತರಕಾರಿ ಬೆಳೆಯುವುದು ಹಾಗೂ ಚಾಪೆ ಹೆಣೆಯುವುದು, ಚಿತ್ರದ ಕೆಲಸ ಇವೇ ಮೊದಲಾದ ಗ್ರಾಮೀಣ ಉದ್ಯೋಗಗಳನ್ನು ಕಲಿಸಿ, ವ್ಯಕ್ತಿಗೆ ಸಾಮೂಹಿಕ ಜೀವನದ ಮೌಲ್ಯ, ಸ್ವಯಂ ಶಿಸ್ತು, ಜವಾಬ್ದಾರಿ ಮನೋಭಾವನೆಗಳನ್ನು ಬೆಳೆಸಿ, ಬಿಡುಗಡೆಯ ನಂತರ ವ್ಯಕ್ತಿಯನ್ನು ಪುನಃ ಸಮಾಜ ದೊಂದಿಗೆ ಪುನರ್ವಸತಿಗೊಳಪಡಿಸುವುದೇ ಈ ತಂತ್ರದ ಗುರಿ.

3. ಸಾಮೂಹಿಕ ಸಂಪರ್ಕ ವಿಧಾನ

ವ್ಯಕ್ತಿಯು ಕೆಲವು ಸಮಸ್ಯೆಗಳನ್ನು ಎದುರಿಸುವಾಗ, ಪರಿಸ್ಥಿತಿ ಗಳಿಗನುಗುಣವಾಗಿ ತೆಗೆದುಕೊಳ್ಳುವ ನಿರ್ಧಾರಗಳು ಅವನ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ.

ವ್ಯಕ್ತಿಯಲ್ಲಿನ ಶಕ್ತಿ, ಧೈರ್ಯ, ಜೀವನದ ಗುರಿ, ನಂಬಿರುವ ಧಾರ್ಮಿಕ ನಂಬಿಕೆ, ಅವನ ಪ್ರೀತಿ, ವಿಶ್ವಾಸ, ಹಗೆತನ, ಅವನ ನಡೆ ನುಡಿ, ಜೀವನದ ಗುರಿ, ಮೌಲ್ಯಗಳು ಇವೇ ಮೊದಲಾದ ಗುಣಗಳು ಹಲವು ಸಂದರ್ಭಗಳಲ್ಲಿ ಅವನು ಸಂಪರ್ಕಿಸಬಹುದಾದ ಕ್ರಿಯಾತ್ಮಕ ಗುಂಪಿನ ಸಂಸ್ಕೃತಿಯ ಪ್ರಭಾವದಿಂದ ಮಾರ್ಪಾಡು ಹೊಂದುವ ಸಾಧ್ಯತೆಗಳಿವೆ.

ಈ ಕಾರಣದಿಂದ ಅಪರಾಧಿಯನ್ನು ಸೆರೆಮನೆಯ ಬಂಧನ ದಲ್ಲಿರಿಸಿದಾಗ, ಶಿಕ್ಷಣ, ತರಬೇತಿ, ಸ್ವಯಂ ಆಡಳಿತ, ಇವೇ ಮೊದಲಾದ ಸಾಮೂಹಿಕ ಚಿಕಿತ್ಸಾ, ಸಂಧಾರಣಾ ಕ್ರಮಗಳಿಂದ ಅವನನ್ನು ತಿದ್ದಲು ಪ್ರಯತ್ನಿಸಬಹುದು, ಮತ್ತೆ ಕೆಲವು ಸಂದರ್ಭ

ಗಳಲ್ಲಿ ಬಿಡುಗಡೆಯ ಮುನ್ನ ಅಥವಾ ಬಿಡುಗಡೆಯ ನಂತರ, ವ್ಯಕ್ತಿಯ ಚಾರಿತ್ರ್ಯದ ಬಗ್ಗೆ ಸಾಕಷ್ಟು ಸಾಮಾಜಿಕ ವರದಿಯನ್ನು ಸಿದ್ಧಪಡಿಸಿ, ಅದರ ಆಧಾರದಮೇಲೆ, "ಪರಿವೀಕ್ಷಣೆ" ಅಥವಾ "ವಚನ" ಕೊಟ್ಟು ಬಿಡುಗಡೆ ಹೊಂದುವ ಕ್ರಮಗಳಿಂದ ಬಂಧಿಯನ್ನು ತೆರೆದ ಸಮಾಜದೊಂದಿಗೆ ಸಂಪರ್ಕ ಬೆಳೆಸಲು ಪ್ರಯತ್ನಿಸುವುದು. ಇವರನ್ನು ಉಸ್ತುವಾರಿಕೆಯ ಗೃಹಗಳ ಅಥವಾ ಸೇವಾ ಮನೋಭಾವನೆ ಹೊಂದಿದ ಕಲ್ಯಾಣ ಸಂಸ್ಥೆಗಳಲ್ಲಿರಿಸಿ, ಅನೇಕ ಸಾರ್ವಜನಿಕ ಕಾರ್ಯಕ್ರಮಗಳನ್ನೇರ್ಪಡಿಸುವುದು. ಅಂದರೆ ಅವರನ್ನು ಸಮುದಾಯ ಸಂಪರ್ಕದಿಂದ ಮಾರ್ಪಡಿಸಬಹುದಾದ, ನಾಟಕ, ದೊಂಬರ ಕುಣಿತ, ಯಕ್ಷಗಾನ, ಜಾನಪದಗೀತೆ, ನೃತ್ಯ, ಸಂಗೀತ, ಇವೇ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಮನರಂಜಿಸುವುದು. ಪ್ರತಿಯೊಬ್ಬ ಸದಸ್ಯನಿಗೂ ಸಕ್ರಿಯವಾಗಿ ಅಂತಹ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವುದು. ಇಂತಹ ರಚನಾತ್ಮಕ ಕ್ರಿಯೆಗಳು ವ್ಯಕ್ತಿಯ ಕಠಿಣ ಹೃದಯವನ್ನು ಕರಗಿಸಿ, ಅವನ ಪೂರ್ವ ಸ್ವಭಾವವನ್ನು ಬದಲಿಸುವುದರಿಂದ ಅವನು ಸುಧಾರಣೆ ಹೊಂದುವ ಸಾಧ್ಯತೆಗಳು ಹೆಚ್ಚು.

4. ಪರಿವೀಕ್ಷಣೆ

ಪರಿವೀಕ್ಷಣೆ ಎಂದರೆ ನಡತೆಯನ್ನು ಪರೀಕ್ಷೆಗೆ ಒಳಪಡಿಸುವುದು ಎಂಬುದಾಗಿ ವಿವರಿಸಬಹುದು. ಶಿಕ್ಷೆ ಹೊಂದಿದವನನ್ನು ಕಾರಾಗೃಹಕ್ಕೆ ಕಳುಹಿಸುವ ಬದಲು ಸಭ್ಯ ನಡತೆಯುಳ್ಳವನಾಗಿರಬೇಕೆಂಬ ನಿರ್ಬಂಧದಮೇಲೆ, ವ್ಯಕ್ತಿ ಅನುಭವಿಸಬೇಕಾದ ಶಿಕ್ಷೆಯ ಅವಧಿಯನ್ನು ಅಮಾನತ್ತಿನಲ್ಲಿಟ್ಟು ಬಿಡುಗಡೆ ಮಾಡುವುದು. ಈ ಅವಧಿಯಲ್ಲಿ ವ್ಯಕ್ತಿಗೆ ಚಿಕಿತ್ಸಾ, ಸಲಹೆ ನೀಡುವುದು. ಅವನ ವರ್ತನೆ

ಯನ್ನು ತಿದ್ದಿಕೊಳ್ಳಲು ಅವಕಾಶ ಕೊಡುವುದು. ಅವನ
ಮೇಲ್ವಿಚಾರಣೆಯಿಂದ ಸಮಾಜದ ಜನರೊಂದಿಗೆ ಬೆರೆತ
ಸಹಬಾಳ್ವೆ ನಡೆಸಲು ನೆರವಾಗುವುದು. ಇದನ್ನು ಸರ್ಕಾರದ
ವತಿಯಿಂದ, ನ್ಯಾಯಾಧೀಶರ ಆದೇಶದಂತೆ ಪರಿವೀಕ್ಷಣಾ
ಅಧಿಕಾರಿ ನಡೆಸುತ್ತಾನೆ. ಪರಿವೀಕ್ಷಣೆಗೊಳಪಟ್ಟ ಅವಧಿಯಲ್ಲಿ
ವ್ಯಕ್ತಿ ಬಂಧನದಿಂದ ಬಿಡುಗಡೆ ಹೊಂದಿದ್ದರೂ, ನ್ಯಾಯದ
ಹಿಡಿತಕ್ಕೆ ಒಳಪಟ್ಟಿರುತ್ತಾನೆ. ಈ ಅವಧಿಯಲ್ಲಿ ಅವನು ಕಾನೂನ
ಉಲ್ಲಂಘಿಸುವ ಚಟುವಟಿಕೆಗಳಲ್ಲಿ ತೊಡಗಿದರೆ ಅಥವಾ ಅವನ
ಮೇಲೆ ಹೇರಿರುವ ನಿಬಂಧನೆಯನ್ನು ಮುರಿದರೆ, ನ್ಯಾಯಾಲಯವು
ಅವನ ಪರೀಕ್ಷಾ ಅವಧಿಯನ್ನು ರದ್ದುಪಡಿಸಿ, ತಡೆ ಹಿಡಿದ ಶಿಕ್ಷೆ
ಯನ್ನು ಜಾರಿಗೆ ತರುತ್ತದೆ. ಅವನ ನಡತೆ ದೀರ್ಘಾವಧಿ
ಕಾಲದವರೆಗೂ ಉತ್ತಮವಾಗಿದ್ದರೆ, ನ್ಯಾಯಾಲಯವು ವ್ಯಕ್ತಿಯ
ಮೇಲಿನ ಹಿಡಿತವನ್ನು ಹಿಂತೆಗೆದುಕೊಳ್ಳುತ್ತದೆ. ಆದರೆ ಅವನ್ನು
ಹಿಂತೆಗೆದುಕೊಳ್ಳುವುದಕ್ಕೆ ಮೊದಲು ವ್ಯಕ್ತಿಯ ಪೂರ್ವ ಚರಿತ್ರೆ
ಅಪರಾಧ ಕೃತ್ಯ ನಡೆದ ಸನ್ನಿವೇಶ, ಸಾಮಾಜಿಕ ಹಿನ್ನೆಲೆ ಪರಿವೀಕ್ಷಣೆ
ಅವಧಿಯಲ್ಲಿನ ಸಮಾಜಕರ್ತನ ವರದಿ ಮತ್ತು ವ್ಯಕ್ತಿಯನ್ನು
ಬಿಡುಗಡೆ ಮಾಡುವುದರಿಂದಾಗಬಹುದಾದ ಫಲಿತಾಂಶ, ಇವೇ
ಮೊದಲಾದುವುಗಳನ್ನು ಗಮನಕ್ಕೆ ತೆಗೆದುಕೊಂಡು ನಂತರ ರದ್ದು
ಪಡಿಸುತ್ತಾರೆ.

5. ವಚನ (ಪೆರೋಲ್)

ವಚನ ಕೊಟ್ಟು ತಾತ್ಕಾಲಿಕವಾಗಿ ಬಿಡುಗಡೆ ಹೊಂದು
ವುದಕ್ಕೆ ಪೆರೋಲ್ ಎಂದು ಹೆಸರು. ಸೆರೆಮನೆಯ ಶಿಕ್ಷೆ ನಿರ್ದಿಷ್ಟ
ವಾಗಿರಬಹುದು ಅಥವಾ ಅನಿರ್ದಿಷ್ಟವಾಗಿಯಾದರೂ ಇರ

ಬಹುದು. ಬಂಧಿ ತನ್ನ ಶಿಕ್ಷೆಯ ಕನಿಷ್ಟ ಅವಧಿಯನ್ನು ಬಂಧನದಲ್ಲಿ ಕಳೆದ ನಂತರ ವ್ಯಕ್ತಿ ತನ್ನ ನಡತೆಯನ್ನು ತಿದ್ದಿಕೊಂಡು ಸಮಾಜದೊಂದಿಗೆ ಹೊಂದಿಕೊಳ್ಳುವ ಸಾಧ್ಯತೆ ಇದೆ ಎಂದು ತೋರಿದಾಗ, ಅಪರಾಧಿಯು ಮಾನಸಿಕ ಹದವನ್ನು ಗುರುತಿಸುವ ಸೆರೆಮನೆ ಅಧಿಕಾರಿಗೆ ಬಿಡುಗಡೆಯ ನಂತರ ಸಭ್ಯನಾಗಿರುತ್ತೇನೆ ಎಂದು "ವಚನ"ಕೊಟ್ಟು, ಅವಧಿಪೂರ್ವ ಬಿಡುಗಡೆ ಹೊಂದುವುದು. ಈ ಅವಧಿಯಲ್ಲಿ ವ್ಯಕ್ತಿಯ ವರ್ತನೆ ಅಸಮರ್ಪಕವಾಗಿದ್ದರೆ, ಅವನು ಇನ್ನೂ ಕಾನೂನಿನ ಹಿಡಿತಕ್ಕೆ ಒಳಪಟ್ಟಿರುವನಾದುದರಿಂದ ಮೇಲ್ವಿಚಾರಣಾ ಅಧಿಕಾರಿಯ ವರದಿಯಂತೆ, ನ್ಯಾಯಾಲಯವು ಅವನ ಬಿಡುಗಡೆಯ ಅವಧಿಯನ್ನು ರದ್ದುಪಡಿಸಿ, ಮುಂದುವರಿಸಿದ ಶಿಕ್ಷೆಯ ಪೂರ್ತಾ ಅವಧಿಯನ್ನು ಬಂಧನದಲ್ಲಿಯೇ ಕಳೆಯಬೇಕಾಗುತ್ತದೆ.

ಪರಿವೀಕ್ಷಣೆ ಮತ್ತು ಪೆರೋಲ್ (ವಚನ) ಮೇಲ್ನೋಟಕ್ಕೆ ಒಂದೇ ರೀತಿಯಲ್ಲಿ ಕಂಡರೂ, ಪರಿವೀಕ್ಷಣೆಯಲ್ಲಿ ಸೆರೆಮನೆಗೆ ಕಳುಹಿಸುವ ಮುನ್ನವೇ ಮೇಲ್ವಿಚಾರಣೆಯ ಕ್ರಮವಾದರೆ, 'ವಚನ'ದಲ್ಲಿ ಅವಧಿಪೂರ್ವ ಬಿಡುಗಡೆ ಹೊಂದುವುದು.

೭. ಬಾಲಾಪರಾಧಿಗಳ ರಕ್ಷಣೆ

ಮೇಲ್ಕಂಡ ಸಂಸ್ಥೆಗಳು ಶಿಕ್ಷೆಗೆ ಗುರಿಯಾದ ವಯಸ್ಕರನ್ನು ಮತ್ತು ತರುಣರನ್ನು ಮಾರ್ಪಡಿಸುವಂತೆ ಬಾಲಾಪರಾಧಿಗಳ ಸಂರಕ್ಷಣೆಯ ಜವಾಬ್ದಾರಿ ಹೊತ್ತು, ಅವರನ್ನು ತಿದ್ದಲು ಎರಡು ಸಂಸ್ಥೆಗಳನ್ನು ನೇಮಿಸಲಾಗಿದೆ.

1. **ಬಾಲಾಪರಾಧಿ ನ್ಯಾಯಾಲಯ ಹಾಗೂ**
2. **ಬಾಲಕ ಕಲ್ಯಾಣ ಮಂಡಳಿ**

ಬಾಲಕಾರ್ಮಿಕರ ಮತ್ತು ಬಾಲಾಪರಾಧಿಗಳ ಯೋಗಕ್ಷೇಮ ನೋಡಿಕೊಳ್ಳುವ ಬಗ್ಗೆ ಬಾಲಕಾರ್ಮಿಕರ ಕಾನೂನು ಹಾಗೂ ಬಾಲಾಪರಾಧ ನ್ಯಾಯಾಲಯಂಗಳು ಹುಟ್ಟಿಕೊಂಡವು. ಮಕ್ಕಳ ಕಲ್ಯಾಣ, ತರಬೇತಿ ಮುಂತಾದುವುಗಳನ್ನು ನೋಡಿಕೊಳ್ಳಲು ರಕ್ಷಣಾಗೃಹ (ರಿಮ್ಯಾಂಡ್ ಹೋಂ), ಪ್ರಾಮಾಣಿತ ಶಾಲೆ (ಸರ್ಟಿಫೈಡ್ ಸ್ಕೂಲ್), ತದನಂತರ ಕ್ಷೇಮಾಭಿವೃದ್ಧಿ ಗೃಹ (ಆಫ್ಟರ್ ಕೇರ್ ಹಾಸ್ಟೆಲ್), ಮಕ್ಕಳನ್ನು ಸುಧಾರಣೆ ಮಾಡಲು ಅಸ್ತಿತ್ವಕ್ಕೆ ಬಂದಿರುವ ಇನ್ನೂ ಅನೇಕ ಸಂಸ್ಥೆಗಳೆಂದರೆ ನೆರವು ನೀಡುವ ಗೃಹ (ಆಕ್ಸಿಲಿಯರಿ ಹೋಂ), ಪೋಷಣಾ ಗೃಹ (ಫೋಸ್ಟರ್ ಹೋಂ), ಶಕ್ತ ವ್ಯಕ್ತಿಯ ಸಂಸ್ಥೆ (ಫಿಟ್ ಪರ್ಸನ್ ಇನ್‌ಸ್ಟಿಟ್ಯೂಷನ್), ಅಲಕ್ಷ್ಯ ಮಕ್ಕಳ ಸಂಸ್ಥೆ (ಅನ್‌ಕೇರ್ಡ್ ಚಿಲ್ಡ್ರನ್ ಇನ್‌ಸ್ಟಿಟ್ಯೂಷನ್), ಸುಧಾರಣಾ ಶಾಲೆ (ರಿಫರ್ಮೇಟರಿ ಸ್ಕೂಲ್) ಮತ್ತು ಬಾರ್‌ಸ್ಟರ್ ಸಂಸ್ಥೆ (ಬಾರ್‌ಸ್ಟರ್ ಇನ್‌ಸ್ಟಿಟ್ಯೂಷನ್) ಇವೇ ಮೊದಲಾದುವುಗಳು.

ನಾಗರಿಕ, ಅಪರಾಧ ವಿಜ್ಞಾನವು, ದಂಡನೀತಿಯಲ್ಲಿ ಹೆಚ್ಚು ಆಸಕ್ತಿವಹಿಸಿ 'ಅಪರಾಧ'ಕ್ಕೆ ತಕ್ಕ ಶಿಕ್ಷೆಗಿಂತ 'ಅಪರಾಧಿ'ಗೆ ತಕ್ಕ ಶಿಕ್ಷೆ ವಿಧಿಸುವುದರ ಬಗ್ಗೆ ಹೆಚ್ಚು ಗಮನಹರಿಸಿ ಗಣನೀಯವಾಗಿ ಪ್ರಶಂಸೆಗೆ ಅರ್ಹವಾಗಿದೆ.

3. ರಕ್ಷಣಾ ಗೃಹ

ಬಂಧಿಸಿದ ಮಕ್ಕಳನ್ನು 24 ಗಂಟೆಗಳೊಳಗಾಗಿ, ವ್ಯಾಪ್ತಿಗೊಳಪಟ್ಟ ಬಾಲಾಪರಾಧಿ ನ್ಯಾಯಾಲಯ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರು ಪಡಿಸತಕ್ಕದ್ದು. ಮಕ್ಕಳ ನಡವಳಿಕೆ ಬಗ್ಗೆ ಗಮನವಿಟ್ಟು ಪರಿವೀಕ್ಷಣ

ಅಧಿಕಾರಿ (ಸಮಾಜಕರ್ತ) ಮಕ್ಕಳ ಹಿನ್ನೆಲೆಯ ಪೂರ್ವ ಮಾಹಿತಿಗಳನ್ನು ಸಿದ್ಧಪಡಿಸುತ್ತಾರೆ. ಆವನ ವರದಿಯ ಮೇಲೆ ನ್ಯಾಯಾಲಯ ನಿರ್ಣಯ ಕೈಗೊಳ್ಳುತ್ತದೆ. ಬಾಲಾಪರಾಧಿಯೆಂದು ಖಚಿತವಾದಲ್ಲಿ, ಅಂತಹವರನ್ನು ಸಮಾಜಕರ್ತನ ಮೇಲ್ವಿಚಾರಣೆಗೊಳಪಡಿಸಿ, ರಕ್ಷಣಾ ಗೃಹಗಳಿಗೆ ಕಳುಹಿಸಲಾಗುವುದು. ಈ ಗೃಹಗಳಲ್ಲಿ ಮಕ್ಕಳಿಗೆ ಪೂರ್ಣ ಸ್ವಾತಂತ್ರ್ಯವಿದ್ದು, ಅವರಿಗೆ ಶಾಲಾ ಶಿಕ್ಷಣ ನೀಡಲಾಗುವುದು. ಸರ್ಕಾರದಿಂದ ಧನಸಹಾಯ ಪಡೆದ ಖಾಸಗಿ ಸಂಸ್ಥೆಗಳು ಇಂತಹ ಗೃಹಗಳನ್ನು ನಡೆಸುತ್ತವೆ.

4. ಪ್ರಾಮಾಣಿತ ಶಾಲೆ

ಇವು ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆ. ಇಲ್ಲಿ 2 ವರ್ಷಗಳವಧಿಯಲ್ಲಿ ಮಕ್ಕಳ ರಕ್ಷಣೆ ಮತ್ತು ಮೇಲ್ವಿಚಾರಣೆ ನಡೆಯುತ್ತದೆ. 12 ವರ್ಷದ ಬಾಲಕನಿಗೆ ಸಾಮಾನ್ಯಜ್ಞಾನ ಮತ್ತು ತಾಂತ್ರಿಕ ಜ್ಞಾನದ ಶಿಕ್ಷಣ ನೀಡಿದರೆ, 16 ವರ್ಷದ ಬಾಲಕರಿಗೆ ವೃತ್ತಿಶಿಕ್ಷಣ ನೀಡಲಾಗುವುದು. ಶಾಲೆಯಿಂದ ಬಿಡುಗಡೆಯಾದ ಮಕ್ಕಳನ್ನು ಸಮಾಜಕರ್ತನ ಮೇಲ್ವಿಚಾರಣೆಗೆ ಒಪ್ಪಿಸಲಾಗುವುದು. ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶಾಲೆಗಳಿವೆ.

5. ಫಾರ್ಟರ್ ರಕ್ಷಣಾ ಗೃಹ

ನ್ಯಾಯಾಲಯಗಳಿಂದ ಆದೇಶ ಪಡೆದ 10 ವರ್ಷದ ಒಳಗಿನ ಮಕ್ಕಳನ್ನು ಈ ಗೃಹಗಳಲ್ಲಿ ಇಟ್ಟುಕೊಳ್ಳುತ್ತಾರೆ. ಇದನ್ನು ಸರ್ಕಾರದಿಂದ ಧನಸಹಾಯ ಪಡೆದ ಖಾಸಗಿ ಸಂಸ್ಥೆಗಳು ನಡೆಸುತ್ತವೆ.

6. ಅಲಕ್ಷ್ಯ ಮಕ್ಕಳ ಗೃಹ

ಈ ಸಂಸ್ಥೆಗಳನ್ನು ಸೇವಾಮನೋಭಾವದಿಂದ ನಡೆಸುವ ಅನಾಥಾಶ್ರಮ ಮತ್ತು ಕೆಲವು ಮಕ್ಕಳ ಸಂಸ್ಥೆಗಳು ನಡೆಸುತ್ತವೆ. ಬಡತನ, ಪೋಷಕರ ಅನಾದರಣೆ, ತಂದೆ–ತಾಯಿಯರ ಸಾವು, ಮುರಿದ ಮನೆ, ಮುಂತಾದ ಕುಟುಂಬಗಳಿಂದ ಬಂದ ಮಕ್ಕಳನ್ನು ಇಲ್ಲಿ ಪೋಷಿಸುತ್ತಾರೆ.

7. ಬಾರ್ಸ್ಟಲ್ ಗೃಹ

ಶಿಕ್ಷೆಗೆ ಗುರಿಯಾದ 12ರಿಂದ 15 ವರ್ಷದ ಬಾಲಕ, ಬಾಲಕಿಯರನ್ನು ಈ ಸಂಸ್ಥೆಗಳಿಗೆ ಕಳುಹಿಸಲಾಗುವುದು. ಇಲ್ಲಿ ಅವರ ಮನಸ್ಸು, ವಯಸ್ಸು, ವರ್ತನೆ, ಪೂರ್ವ ಚರಿತ್ರೆಯ ಆಧಾರದ ಮೇಲೆ ವಿವಿಧ ರೀತಿಯ ಶಿಕ್ಷಣ ಹಾಗೂ ತರಬೇತಿ ನೀಡಲಾಗುವುದು.

೮. ಅಪರಾಧ ನ್ಯಾಯ

ಭಾರತದ ಅಪರಾಧ ನ್ಯಾಯಪ್ರಕ್ರಮವನ್ನು, ನ್ಯಾಯಾಲಯ, ಪೊಲೀಸು ಮತ್ತು ಸೆರೆಮನೆಗಳೆಂದು ಮೂರು ಭಾಗಗಳಾಗಿ ವಿಂಗಡಿಸಬಹುದು. ಇವು ಒಂದಕ್ಕೊಂದು ಸಂಬಂಧಿಸಿದ್ದು, ಅಪರಾಧ ನ್ಯಾಯ ವಿತರಣೆಯಲ್ಲಿ ಪರಸ್ಪರ ಸಹಕಾರದೊಂದಿಗೆ ಕೆಲಸ ಮಾಡುತ್ತವೆ. ಅಪರಾಧ ಕಾನೂನನ್ನು ಜಾರಿಗೆ ತರುವಲ್ಲಿ ಶಾಸಕರ ಉದ್ದೇಶವನ್ನು ಸಾಧಿಸುವುದೇ ಅಪರಾಧ ನ್ಯಾಯದ ಮುಖ್ಯ ಗುರಿ. ಈ ಸಂಸ್ಥೆಗಳ ವ್ಯಾಪ್ತಿಗೆ ಬರುವ, ಅದರ ರಚನೆ, ಸಿಬ್ಬಂದಿವರ್ಗ, ಆಡಳಿತ, ಅಧಿಕಾರ, ನೀತಿ ನಿಯಮಗಳು ಮತ್ತು ಕಾರ್ಯಾಚರಣೆಯನ್ನು ಇಲ್ಲಿ ವ್ಯಾಖ್ಯಾನಿಸಲು ಸಾಧ್ಯವಾಗ

ದಿದ್ದರೂ, ಅಪರಾಧ ನ್ಯಾಯ ವಿತರಣೆಯಲ್ಲಿ, ಅಪರಾಧ ದಾನಿಗಳೆನಿಸಿದ ನ್ಯಾಯಾಧೀಶರು, ಸಮಾಜದಲ್ಲಿ ಶಾಂತಿ ಮತ್ತು ವ್ಯವಸ್ಥೆಯನ್ನು ಏರ್ಪಡಿಸಿ, ಪತ್ತೆದಾರಿ ಕೆಲಸ ಮಾಡುವ ಪೊಲೀಸರು, ಅವರ ವೃತ್ತಿಯಲ್ಲಿ ಗಮನಿಸಬೇಕಾದ ಕೆಲವು ಮುಖ್ಯ ಅಂಶಗಳನ್ನು ಈ ಕೆಳಕಂಡ ನಿದರ್ಶನಗಳಿಂದ ಸಮರ್ಥಿಸಲಾಗಿದೆ.

ಕ್ರಿಸ್ತಪೂರ್ವ 580ರಲ್ಲಿ ಬಾಬೀಲೆ ಪಟ್ಟಣದ ಅರಸನಾದ ನೆಬಕಡ ನೇಜರನು ಯೂದಾಯ ರಾಜ್ಯಕ್ಕೆ ಮುತ್ತಿಗೆ ಹಾಕಿ ಅದರ ಸಿರಿಸಂಪತ್ತನ್ನು ಕೊಳ್ಳೆ ಹೊಡೆದು, ಆ ರಾಜ್ಯದ ರಾಜ, ಅವನ ವಂಶಸ್ಥರನ್ನು ಹಾಗೂ ಅವನ ಜನಾಂಗದವರನ್ನು ಸೆರೆ ಹಿಡಿದು ಹಿಂದಿರುಗುತ್ತಾನೆ. ಸೆರೆ ಹಿಡಿದ ಯುವನಸ್ಥರಲ್ಲಿ ದಾನಿಯೇಲನೆಂಬ ಜ್ಞಾನಿಯೊಬ್ಬನು. ಈತನ ಜ್ಞಾನ, ಬುದ್ಧಿವಂತಿಕೆ, ವೈಜ್ಞಾನಿಕ ಅರಿವನ್ನು ಕಂಡ ರಾಜನು ಅವನನ್ನು ತನ್ನ ಮಂತ್ರಿಯನ್ನಾಗಿ ಆರಿಸಿಕೊಳ್ಳುತ್ತಾನೆ. ಯಹೂದ್ಯರ ಅಪೋಕ್ರಿಫ ಗ್ರಂಥದಿಂದ ಆಯ್ದು, ವಿಶ್ವದ ಗ್ರಂಥದಲ್ಲೇ ಅತಿ ಶ್ರೇಷ್ಠ ಕಿರುಕಥೆಗಳೆರಡನ್ನು ವಿವರಿಸುತ್ತಾ, ವೈಚಾರಿಕತೆಯಿಂದ ಕೂಡಿದ ನ್ಯಾಯ ವಿತರಣೆ ಹಾಗೂ ವೈಜ್ಞಾನಿಕವಾಗಿ ಬಳಸಲಾದ ಅಪರಾಧ ಶೋಧನಾ ಕ್ರಮವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

(ಅ) ಪ್ರತ್ಯಕ್ಷ ಸಾಕ್ಷ್ಯವನ್ನು ಪ್ರಾಮಾಣಿಸಿ ನೋಡಬೇಕೆಂಬುದು ಮೊದಲನೆಯ ಕಥೆಯ ತಿರುಳು. ಯಹೂದ್ಯನೊಬ್ಬನ ಸ್ಫುರದ್ರೂಪಿ ಹೆಂಡತಿಯೊಬ್ಬಳನ್ನು ಬಾಬೇಲ್ ಪಟ್ಟಣದ ಪುರಪ್ರಮುಖರಿಬ್ಬರು ತಮ್ಮ ಕಾಮತೃಷೆಗಾಗಿ ಮೋಹದ ಜಾಲವನ್ನು ಒಡ್ಡಿ ವಿಫಲರಾದಾಗ ಆಕೆಯಮೇಲೆ ವ್ಯಭಿಚಾರದ ಸುಳ್ಳು ಆಪಾದನೆಯನ್ನು ಹೊರಿಸುತ್ತಾರೆ. ರಾಜನು ಆ ಪ್ರಮುಖ

ಪೌರರು ನೀಡಿದ ಪ್ರತ್ಯಕ್ಷ ಸಾಕ್ಷ್ಯದ ಆಧಾರದಮೇಲೆ ಗುಣ ಸಂಪನ್ನಳಾದ ಸುಸೇನಾ ಎಂಬಾಕೆಗೆ ಮರಣದಂಡನೆಯನ್ನು ವಿಧಿಸುತ್ತಾನೆ. ಆದರೆ ಆ ರಾಜ್ಯದ ಮಂತ್ರಿಯಾಗಿದ್ದ ದಾನಿಯೇಲ ನೆಂಬ ಜ್ಞಾನಿಯು ಮಧ್ಯ ಪ್ರವೇಶಿಸಿ ಪ್ರತ್ಯಕ್ಷ ಸಾಕ್ಷ್ಯವನ್ನು ಪರಾಮರ್ಶಿಸುವ ರಾಜನು ಅದನ್ನು ಪ್ರಮಾಣಿಸಿ ನೋಡಬೇಕು ಎಂದು ಹೇಳಿ, ಸಾಕ್ಷಿಗಳನ್ನು ಉದ್ದೇಶಿಸಿ, ಅವರು ಯಾವ ಸ್ಥಳದಲ್ಲಿದ್ದಾಗ ಅಪರಾಧ ದೃಶ್ಯ ಕಂಡರೆಂಬುದನ್ನು ಪ್ರದರ್ಶಿಸಬೇಕೆಂದು ಒಬ್ಬೊಬ್ಬರನ್ನು ವಿಂಗಡಿಸಿ ಪರೀಕ್ಷಿಸಿದಾಗ ಒಬ್ಬೊಬ್ಬರೂ ಒಂದೊಂದು ಜಾಗವನ್ನು ತೋರಿಸಿದುದರಿಂದ ಆಪಾದನೆ ಸುಳ್ಳೆಂದು ನಿರೂಪಿಸಿ, ಆ ಸ್ತ್ರೀಯನ್ನು ಮರಣದಂಡನೆಯಿಂದ ಮುಕ್ತಗೊಳಿಸುತ್ತಾನೆ.

ನ್ಯಾಯ ವಿಚಾರಣೆಯಲ್ಲಿ ತೊಡಗುವ ನ್ಯಾಯಾಧೀಶರು ತೀರ್ಪು ನೀಡುವ ಮೊದಲು ಈ ರೀತಿಯ ನ್ಯಾಯದ ನೀತಿಯನ್ನು ಅನುಸರಿಸುತ್ತಿರುವುದು ಶ್ಲಾಘನೀಯ.

(ಆ) ಬೇಲ್ ಮತ್ತು ಡ್ರಾಗನ್ ಎಂಬುದು ವಿಶ್ವದಲ್ಲೇ ಅತಿ ಪುರಾತನವಾದುದೆಂದು ಹೇಳಲಾದ ಪತ್ತೇದಾರಿ ಕಥೆ. ಅಪರಾಧ ಶೋಧನೆಯಲ್ಲಿ ತೊಡಗುವ ಪೊಲೀಸರು ವೈಜ್ಞಾನಿಕ ವಾಗಿ ಅಪರಾಧವನ್ನು ಪತ್ತೆ ಹಚ್ಚುವ ಕ್ರಮವನ್ನು ವಿವರಿಸುತ್ತದೆ.

ಪರ್ಶಿಯಾ ದೇಶದ ರಾಜನಾದ ಸೈರಸನು ಬಾಬೇಲ್ ಪಟ್ಟಣದ ಬೇಲ್ ದೇವತೆಯನ್ನು ಆರಾಧಿಸಲು ದಾನಿಯೇಲ್ ಜ್ಞಾನಿಯು ನಿರಾಕರಿಸಿದಾಗ ರಾಜನ ಆಗ್ರಹಕ್ಕೆ ಒಳಗಾಗುತ್ತಾನೆ. ರಾಜಾಜ್ಞೆಯಂತೆ ಪ್ರತಿನಿತ್ಯವೂ ಬೇಲ್ ದೇವತೆಯೆನಿಸಿದ ಡ್ರೇಗನ್ ಸಂತತಿಯ ಹಾವಿಗೆ ಆಹಾರವಾಗಿ ಇಂತಿಷ್ಟು ಎಣ್ಣೆ, ಹಿಟ್ಟು, ಕುರಿಗಳ ಬಲಿ ಅರ್ಪಿಸಲ್ಪಡುತ್ತಿತ್ತು. ಇದರ ವಿವರಗಳನ್ನು ತಿಳಿದ

ದಾನಿಯೇಲನು ವಿಚಾರರಹಿತನಾದ ರಾಜನಿಗೆ ಅದರ ಸತ್ಯಾಂಶ ವನ್ನು ಹೊರಗೆಡಹಲು, ರಾಜನ ಅನುಮತಿ ಪಡೆದು ಡ್ರೇಗನ್ ದೇವತೆಗೆ ಅರ್ಪಿಸಲಾಗುತ್ತಿದ್ದ ದೈನಂದಿನ ಆಹಾರವನ್ನು ದೇವತೆಯ ಮುಂದೆ ಇರಿಸಿದಮೇಲೆ ಮಂದಿರದೊಳಗೆ ಹಿಟ್ಟನ್ನು ತೆಳುವಾಗಿ ಸಿಂಪಡಿಸಿ ಬೀಗಹಾಕಿ ಸೀಲು ಹಾಕಿಸುತ್ತಾನೆ. ಮರುದಿನ ರಾಜ ನೊಂದಿಗೆ ದೇವಮಂದಿರವನ್ನು ಪರೀಕ್ಷಿಸಿದಾಗ ದೇವತೆಯ ಮುಂದಿಟ್ಟಿದ್ದ ಆಹಾರವು ಇಲ್ಲವಾಗಿ ಮಂದಿರದಲ್ಲೆಲ್ಲಾ ಹೆಜ್ಜೆಯ ಗುರುತುಗಳನ್ನು ಕಾಣುತ್ತಾನೆ. ಬೇಲ್ ದೇವತೆಯ ಪೂಜಾರಿ ಅವನ ಹೆಂಡತಿ ಮಕ್ಕಳು ಪ್ರತಿದಿನವೂ ಮಂದಿರದೊಳಕ್ಕೆ ಗುಪ್ತ ದ್ವಾರದಿಂದ ಬಂದು ದೇವತೆಯ ಮುಂದೆ ಇರಿಸಿದ ಆಹಾರವನ್ನು ಭುಂಜಿಸುತ್ತಿದ್ದು, ಹೆಜ್ಜೆಯ ಗುರುತುಗಳು, ಪೂಜಾರಿ ಮತ್ತು ಅವನ ಕುಟುಂಬದವರದೆಂದು ವೈಜ್ಞಾನಿಕವಾಗಿ ಗುರುತಿಸಿ, ಸಮರ್ಥಿಸಿದಾಗ ಸತ್ಯಾಂಶವನ್ನು ತಿಳಿದ ಸೈರಸ್ ರಾಜನು ದೇವತೆ ಯೆಂದು ಪೂಜಿಸುತ್ತಿದ್ದ ಹಾವನ್ನು, ಪೂಜಾರಿ ಮತ್ತು ಅವನ ಹೆಂಡತಿ ಮಕ್ಕಳನ್ನು ಕೊಲ್ಲಿಸುತ್ತಾನೆ.

ಅಪರಾಧವನ್ನು ಪತ್ತೆ ಹಚ್ಚುವ ಪೊಲೀಸರು ಶತಮಾನ ಗಳಿಂದ ಬಂದಿರುವ ವೃತ್ತಿಯಲ್ಲಿನ ಬಲಪ್ರಯೋಗದ ಕ್ರೂರ ಮತ್ತು ಒರಟು ವಿಧಾನಗಳನ್ನು ಅಂದರೆ ಆಂಗ್ಲ ಭಾಷೆಯಲ್ಲಿ ಹೇಳುವ ಥರ್ಡ್ ಡಿಗ್ರಿ ಕ್ರಮಗಳನ್ನು ತ್ಯಜಿಸಿ, ಅಪರಾಧ ಶೋಧನೆಗೆ ವೈಜ್ಞಾನಿಕ ವಿಧಾನಗಳನ್ನು ಅನುಸರಿಸುವುದು ಲೇಸು.

ನಾಗರಿಕ ಯುಗದಲ್ಲಿ ಮನುಷ್ಯನ ಜೀವನದ ರೀತಿ ನೀತಿ ಗಳನ್ನು, ಅಭ್ಯಸಿಸಲು ಸಮಾಜ ವಿಜ್ಞಾನ, ಅಪರಾಧ ವಿಜ್ಞಾನ, ಶಿಕ್ಷಣದ ಒಂದು ಪ್ರಾಮುಖ್ಯ ಅಂಶವಾಗಿ ಪರಿಗಣಿಸಲ್ಪಟ್ಟಿವೆ. ಅದರ ಬಗ್ಗೆ ಅನೇಕ ಸಂಶೋಧನೆಗಳು ನಡೆದಿವೆ. ಸಂಯುಕ್ತ

ಸಂಸ್ಥಾನದಲ್ಲಿ ಅಪರಾಧ ಶಾಸ್ತ್ರವನ್ನು ವಿಶ್ವವಿದ್ಯಾನಿಲಯಗಳಲ್ಲಿ ಬೋಧಿಸಿದರೆ, ಯೂರೋಪು ರಾಷ್ಟ್ರಗಳಲ್ಲಿ ಕಾನೂನು ಮತ್ತು ವೈದ್ಯಕೀಯ ಶಿಕ್ಷಣ ಕ್ಷೇತ್ರಗಳಲ್ಲಿ ಬೋಧಿಸುತ್ತಾರೆ. ಇತ್ತೀಚೆಗೆ ಸ್ವತಂತ್ರ ಭಾರತದಲ್ಲೂ ಅನೇಕ ರಾಜ್ಯಗಳ ವಿಶ್ವವಿದ್ಯಾನಿಲಯಗಳು ಈ "ಅಪರಾಧ ಶಾಸ್ತ್ರ"ದ ಅಧ್ಯಯನವನ್ನು ಬೋಧನಾ ವಿಷಯಗಳ ಪಟ್ಟಿಯಲ್ಲಿ ಸೇರಿಸಿರುತ್ತಾರೆ.

ಕೆ.ಸಂ. ೩೧೪೬೬—ಎಂಯುಪಿಎಂ—೧೦,೦೦೦ ಪ್ರತಿಗಳು—೧೪-೮-೯೧

ಕೆಲವು ಸಾಹಿತ್ಯ ಕೃತಿಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ತೀ. ನಂ. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ. ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ತ. ಸು. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ. ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣರಾವ್
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ. ಹಿರಣ್ಮಯ
೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ. ಎಚ್. ತಿಪ್ಪೇರುದ್ರಸ್ವಾಮಿ

೨೯. ಅಲ್ಲಮಪ್ರಭು—ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ
೩೦. ಕಾಳಿದಾಸನ ನಾಟಕಗಳು—ಡಾ. ಕೆ. ಕೃಷ್ಣಮೂರ್ತಿ
೩೧. ಅಣ್ಣನ ಆದರ್ಶ—ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ
೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—
ದೇವಂಗಿ ಟಿ. ಚಂದ್ರಶೇಖರ
೩೩. ಸೂರದಾಸ—ಎಂ. ಎಸ್. ಕೃಷ್ಣಮೂರ್ತಿ
೩೪. ಜನ್ನ—ಡಾ. ಸಿ. ಪಿ. ಕೃಷ್ಣಕುಮಾರ್
೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೩೭. ನಿಜಗುಣಶಿವಯೋಗಿ—ಎಚ್. ಗಂಗಾಧರನ್
೩೮. ಮುದ್ರಾರಾಕ್ಷಸ—ಡಾ. ಎನ್. ಎಸ್. ಅನಂತರಂಗಾಚಾರ್
೩೯. ರಾಘವಾಂಕ—ರಾಮೇಗೌಡ
೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
೪೧. ನಾಗಚಂದ್ರ—ಡಾ. ಸಿ. ಪಿ. ಕೃಷ್ಣಕುಮಾರ್
೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ
೪೩. ಮಹಾಕವಿ ಭಾರವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೪. ಕವಿ ಮುರಾರಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೫. ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
೪೬. ಕವಿ ಶ್ರೀ ಹರ್ಷ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೭. ಕಬೀರದಾಸ—ಡಾ. ಹಿರಣ್ಮಯಿ
೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
೪೯. ಕವಿ ಭಟ್ಟನಾರಾಯಣ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
೫೧. ಪೊನ್ನ—ಎನ್. ಅನಂತರಂಗಾಚಾರ್
೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ
೫೩. ದೇವರ ದಾಸಿಮಯ್ಯ—ಕೆ. ಅನಂತರಾಮು
೫೪. ಸಂಸ್ಕೃತ ಸಾಹಿತ್ಯ—ಡಾ. ಆರ್. ಎಸ್. ಶಿವಗಣೇಶಮೂರ್ತಿ
೫೫. ಚಾಮುಂಡರಾಯ—ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ
೫೬. ಶ್ರೀ ಸಮರ್ಥ ರಾಮದಾಸರು—ಬಿ. ಪಿ. ಚಂದ್ರಾಬಾಯಿ
೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ
೫೮. ಭಾರತೀಯ ಮಹಿಳಾ ಪರಂಪರೆ—ಬಿ. ಪಿ. ಚಂದ್ರಾಬಾಯಿ
೫೯. ಬಂಧುವರ್ಮ—ಬಿ. ಎಸ್. ಸಣ್ಣಯ್ಯ
೬೦. ಶ್ರೀರಾಮಾಯಣದರ್ಶನಂ—ಒಂದು ಸಮೀಕ್ಷೆ—ಡಾ. ಸಿ. ಪಿ.
ಕೃಷ್ಣಕುಮಾರ್